ಸಂಪುಟ 01 | ಸಂಚಿಕೆ 10 | ಮಂಗಳವಾರ 25 ನವೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ಮಹಿಳೆಯರ ವಿರುದ್ಧದ ಹಿಂಸಾಚಾರ ನಿರ್ಮೂಲನೆಗಾಗಿ ಅಂತರರಾಷ್ಟ್ರೀಯ ದಿನ (International Day for the Elimination of Violence against Women)

ವಿಶೇಷತೆ: ವಿಶ್ವಸಂಸ್ಥೆಯು ಆಚರಿಸುವ ಈ ದಿನವು, ಮಹಿಳೆಯರು ಮತ್ತು ಬಾಲಕಿಯರ ಮೇಲೆ ನಡೆಯುವ ಎಲ್ಲ ರೀತಿಯ ಹಿಂಸಾಚಾರದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಅವುಗಳ ನಿರ್ಮೂಲನೆಗೆ ಕೆಲಸ ಮಾಡಲು ಮೀಸಲಾಗಿರುತ್ತದೆ. ಇದು ಸಾಮಾನ್ಯವಾಗಿ 16 ದಿನಗಳ ಸಕ್ರಿಯತೆ ಅಭಿಯಾನದ ಆರಂಭವನ್ನು ಸೂಚಿಸುತ್ತದೆ.

## ಸುಭಾಷಿತ

‘ನಾವು ಎಷ್ಟು ಓದಿದ್ದೇವೆ ಎಂಬುದು ಮುಖ್ಯವಲ್ಲ,ಆ ಓದು ನಮಗೆ ಎಷ್ಟು ಸಂಸ್ಕಾರವನ್ನು ಕಲಿಸಿದೆ ಎಂಬುದು ಮುಖ್ಯ’

–ಡಾ. ಎ.ಪಿ.ಜೆ ಅಬ್ದುಲ್ ಕಲಾಂ

## ‘ಹೈಕಮಾಂಡ್ ಸೂಚಿಸಿದರೆ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತೇನೆ’
# ಕುತೂಹಲ ಹೆಚ್ಚಿಸಿದ ಸಿದ್ದರಾಮಯ್ಯ ಹೇಳಿಕೆ



ಬೆಂಗಳೂರು: ಐದು ವರ್ಷ ತಾವೇ ಮುಖ್ಯಮಂತ್ರಿಯಾಗಿ ಅವಧಿ ಪೂರ್ಣಗೊಳಿಸುವುದಾಗಿ ಪದೇ ಪದೇ ಹೇಳುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಇದೇ ಮೊದಲ ಬಾರಿಗೆ ಹೇಳಿಕೆ ಬದಲಿಸಿದ್ದು, ಹೈಕಮಾಂಡ್ ಸೂಚನೆ ನೀಡಿದರೆ, ಮುಖ್ಯಮಂತ್ರಿ ಯಾಗಿ ಮುಂದುವರೆಯುತ್ತೇನೆ ಎನ್ನುವ ಮೂಲಕ ಕುತೂಹಲ ಕೆರಳಿಸಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿರುವ ಸಿದ್ದರಾಮಯ್ಯ ಅವರ ಹೇಳಿಕೆ, ರಾಜ್ಯದಲ್ಲಿ ನಾಯಕತ್ವ ಬದಲಾವಣೆಗೆ ಮುನ್ಸೂಚನೆ ನೀಡಿದೆ. ಎರಡೂವರೆ ವರ್ಷದ ಬಳಿಕ ನಾಯಕತ್ವ ಬದಲಾವಣೆಯಾಗಲಿದೆ ಎಂಬ ಚರ್ಚೆಗಳಿಗೆ ಮತ್ತಷ್ಟು ಪುಷ್ಟಿ ಬಂದಿದೆ. ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಾರೆ ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ ಅವರು, ನಾವು ಹೈಕಮಾಂಡ್ ಹೇಳಿದಂತೆ ಕೇಳುತ್ತೇವೆ.

ನಮಲ್ಲಿರುವ ಹೈಕಮಾಂಡ್ ತೀರ್ಮಾನ ಮಾಡಿದರೆ ಅದಕ್ಕೆ ಬದ್ಧವಾಗಿರುತ್ತೇವೆ. ನೀವೇ ಮುಂದುವರಿಯಿರಿ ಎಂದರೆ ಮುಂದುವರಿಯುತ್ತೇನೆ. ಅಂತಿಮವಾಗಿ ಹೈಕಮಾಂಡ್ ಹೇಳಿದಂತೆ ನಾನು ಮತ್ತು ಡಿ.ಕೆ. ಶಿವಕುಮಾರ್ ಇಬ್ಬರು ಒಪ್ಪಿಕೊಳ್ಳಬೇಕಾಗುತ್ತದೆ ಎಂದಿದ್ದಾರೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆಯೇ ಎಂದು ಮಾಧ್ಯಮದವರು ಪ್ರಶ್ನಿಸಿದಾಗ, ಹೈಕಮಾಂಡ್ ಹೇಳಿದಂತೆ ಕೇಳುತ್ತೇವೆ ಎಂದ ಮೇಲೂ ಪುನಃ ಇದೇ ರೀತಿಯ ಪ್ರಶ್ನೆ ಕೇಳುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.4–5 ತಿಂಗಳ ಹಿಂದೆ ಸಂಪುಟ ಪುನರ್‌ರಚನೆ ಮಾಡುವ ಸಲುವಾಗಿ ಚರ್ಚಿಸಲು ದೆಹಲಿಗೆ ಹೋಗಿದ್ದೆ. ಆ ಸಂದರ್ಭದಲ್ಲಿ ಸಂಪುಟ ಪುನರ್ ರಚಿಸಿ ಎಂದು ಹೈಕಮಾಂಡ್ ಸಮತಿ ನೀಡಿತ್ತು. ಆದರೆ ಎರಡೂವರೆ ವರ್ಷದ ಬಳಿಕ ಸಂಪುಟ ಪುನರ್‌ರಚನೆ ಮಾಡುವುದಾಗಿ ತಾವು ಹೇಳಿ ಬಂದಿದ್ದಾಗಿ ತಿಳಿಸಿದರು.

ಈಗ ಹೈಕಮಾಂಡ್ ಹೇಳಿದರೆ ಸಂಪುಟ ಪುನರ್‌ರಚಿಸಲಾಗುತ್ತದೆ. ನಾಯಕತ್ವ ಬದಲಾವಣೆ ವಿಷಯದಲ್ಲೂ ವರಿಷ್ಠರು ಹೇಳಿದಂತೆ ನಡೆದುಕೊಳ್ಳುತ್ತೇವೆ ಎಂದಿದ್ದಾರೆ. ಮೆತ್ತಗಾದ ಸಿದ್ದರಾಮಯ್ಯ: ಡಿ.ಕೆ.ಶಿವಕುಮಾರ್ ಬಣದ ಕೆಲ ಶಾಸಕರು ದೆಹಲಿಗೆ ತೆರಳಿ ವರಿಷ್ಠ ನಾಯಕರನ್ನು ಭೇಟಿ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಲು ಸಿದ್ದರಾಮಯ್ಯ ನಿರಾಕ–ರಿಸಿದ್ದಾರೆ.ಈವರೆಗೂ ಸಿದ್ದರಾಮಯ್ಯ ಅವರು 5 ವರ್ಷ ತಾವೇ ಮುಖ್ಯಮಂತ್ರಿಯಾಗಿ ಮುಂದುವ–ರಿಯುವುದಾಗಿ ಪದೇಪದೇ ಪ್ರತಿಪಾದಿಸುತ್ತಿದ್ದರು. ಆದರೆ ಕೆಲ ದಿನಗಳಿಂದ ನಡೆಯುತ್ತಿರುವ ಬೆಳವಣಿಗೆಗಳು ಸಿದ್ದರಾಮಯ್ಯ ಅವರ ವಿಶ್ವಾಸವನ್ನು ಕುಗ್ಗಿಸಿದಂತೆ ಕಂಡುಬರುತ್ತದೆ.

ಡಿ.ಕೆ.ಶಿವಕುಮಾರ್ ಶಥಾಯಗತಾಯ ಮುಖ್ಯಮಂತ್ರಿ ಆಗಲೇಬೇಕು ಎಂದು ಪಟ್ಟು ಹಿಡಿದಿದ್ದು ತಮದೇ ಆದ ಕಾರ್ಯತಂತ್ರವನ್ನು ಅನುಸರಿಸುತ್ತಿದ್ದಾರೆ. ಇದು ಸಿದ್ದರಾಮಯ್ಯ ಅವರಿಗೆ ಉಸಿರುಗಟ್ಟಿಸುವ ವಾತಾವರಣವನ್ನು ನಿರ್ಮಿಸಿದೆ.

## ಕೋಣಚಪ್ಪಳಿ ಗ್ರಾಮದ ಕೃಷಿ ಮತ್ತು ಗ್ರಾಮೀಣ ಕಾರ್ಮಿಕ ಸಂಘದ ಪದಾಧಿಕಾರಿಗಳ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

ದೇವದುರ್ಗ: ದೊಂಡಬಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೋಣಚಪ್ಪಳಿ ಗ್ರಾಮದಲ್ಲಿ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಗ್ರಾಮ ಘಟಕ ಮಾಡಲಾಯಿತು.



ಅಧ್ಯಕ್ಷರಾಗಿ ಶರಣಬಸವ,ಪ್ರಧಾನ ಕಾರ್ಯದರ್ಶಿಯಾಗಿ ನಾಗಲಿಂಗ ಸೇರಿದಂತೆ 14 ಜನ ಸದಸ್ಯರ ಸಮಿತಿಯನ್ನು ಸಭೆಯೂ ಸರ್ವಾನುಮತದಿಂದ ಆಯ್ಕೆ ಮಾಡಿದೆ ಎಂದು ತಾಲ್ಲೂಕ ಸಮಿತಿ ಅಧ್ಯಕ್ಷ ಲಿಂಗಣ್ಣ ಮಕಾಶಿ ಪತ್ರಿಕೆಗೆ ತಿಳಿಸಿದರು. ಕೃಷಿ ಕೂಲಿಕಾರರಿಗೆ ನರೇಗಾ ಯೋಜನೆಯಡಿ 200 ದಿನ ಕೆಲಸ ನೀಡಬೇಕು, 600 ಕೂಲಿ ನಿಗದಿ ಮಾಡಬೇಕು, 60 ವರ್ಷ ಮೇಲ್ಪಟ್ಟ ಹಿರಿಯ ಕೂಲಿಕಾರರಿಗೆ ಪಿಂಚಣಿ ಸೌಲಭ್ಯ ನೀಡಬೇಕು ಎಂದು.

## ಯುವಕರು ಪಕ್ಷ ಸಂಘಟನೆಯಲ್ಲಿ ನಿರಂತರ ತೊಡಗಿದರೆ ಉನ್ನತ ಸ್ಥಾನ ಪಡೆದುಕೊಳ್ಳಲು ಸಾಧ್ಯ :ಡಾ: ದಾದಾಪೀರ್




❑ ನೈಜ್ಯ ದೆಸೆ ನ್ಯೂಸ್

ಮಸ್ಕಿ: ಇಂದು ಮಸ್ಕಿ ಕಾಂಗ್ರೆಸ್ ಕಚೇರಿಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರ ಸಭೆ ಹಮ್ಮಿಕೊಳ್ಳಲಾಗಿತ್ತು ಪ್ರಾಸ್ತವಿಕ ನುಡಿ ಮಸ್ಕಿ ಯುವ ಕಾಂಗ್ರೆಸ್ ಅಧ್ಯಕ್ಷರು ಶ್ಯಾಮೀದ್ ಗುಂಜಳ್ಳಿ ರವರು ಮಾತನಾಡಿದರು ನಂತರ ಕರ್ನಾಟಕ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಡಾ: ದಾದಾಪೀರ್ ಅವರು ಪಕ್ಷದ ಸಂಘಟನೆ ಹಾಗೂ ಪಂಚಾಗ್ಯಾರಂಟ್ಟಿ ಯೋಜನೆಗಳಿಗೆ ಬಗ್ಗೆ ಪ್ರತಿ ಮನೆ ಮನೆಗೆ ತಿಳಿಸುವ ಕೆಲಸ ಮಾಡಬೇಕು ಹಾಗೂ ವೋಟ್ ಚೋರ್ ಬಗ್ಗೆ ಚುನಾವಣೆ ಆಯೋಗ ಕೇಂದ್ರ ಸರಕಾರ ಕೈ ಗೊಂಬೆ ಎಂದು ಆರೋಪ ಮಾಡಿದರು ಹಾಗೂ ಯುವ ಕಾಂಗ್ರೆಸ್ ನಲ್ಲಿ ದುಡಿದವರು.

ಸಚಿವರು ಶಾಸಕರು ಶಾಸಕರಾಗಿದ್ದಾರೆ ವಿಧಾನ ಪರಿಷತ್ ಸದಸ್ಯರಾಗಿದ್ದಾರೆ ಎಂದು ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದರು ಮತ್ತೊಬ್ಬ ಉಪಸ್ಥಿತರಾದ ರಾಯಚೂರು ಜಿಲ್ಲಾಧ್ಯಕ್ಷರಾದ ಮ–ರಿಸ್ವಾಮಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಡಾ: ದಾದಾಪೀರ್ ರಾಯಚೂರು ಜಿಲ್ಲಾಧ್ಯಕ್ಷ ಮರಿಸ್ವಾಮಿ ಮಸ್ಕಿ ವಿಧಾನಸಭಾ ಅಧ್ಯಕ್ಷ ಶ್ಯಾಮೀದ್ ಗುಂಜಳ್ಳಿ ಮತ್ತೆ ನಗರ ಘಟಕ ಅಧ್ಯಕ್ಷರ ವಿಜಯಕುಮಾರ್ ಆರ್ ಸತೀಶ್ ಗೌಡ ಕಾಂಗ್ರೆಸ್ ಯುವ ಮುಖಂಡರು ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಶಿವಣ್ಣ ನಾಯಕ್ , ಮೈಬು ಸಾಬ್ ಜೇಗರ ಕಲ್ ಅಲ್ಪಸಂಖ್ಯಾತರ ಪ್ರಧಾನ ಕಾರ್ಯದರ್ಶಿ, ಮೈಬು ಹಣಗಿ, ಸಿದ್ದು ಮುರಾರಿ, ಮೌನೇಶ್ ಜಾಲವಾಡಗಿ, ಬಸವರಾಜ ಕಲಮಂಗಿ, ಶ್ರೀಧರ್ ಕಲ್ಮಂಗಿ, ಮೌನೇಶ್ ತಲೆಕಾನ್, ಇಬ್ರಾಹಿಂ ಮೆದುಕಿನಾಳ, ಶೇಕ್ಷವಲಿ , ಬಸವರಾಜ್ ಬುದ್ದಿನ್ನಿ, ಹಾಗೂ ವಿವಿಧ ಘಟಕ ಅಧ್ಯಕ್ಷರು ಸದಸ್ಯರು ಇನ್ನಿತರ ಬಾಗಿ ಯಾಗಿದ್ದರುದ್ದ.

## ಕರ್ನಾಟಕ ಛಲವಾದಿ ಮಹಾಸಭಾದಿಂದ ಪದಾಧಿಕಾರಿಗಳ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದ ವತಿಯಿಂದ ನಗರದ ಸರ್ಕ್ಯೂಟ್ ಹೌಸ್ ನಲ್ಲಿ ಪದಾಧಿಕಾ–ರಿಗಳ ಆಯ್ಕೆ ಸಭೆ ನಡೆಸಲಾಯಿತು.

ತಾಲೂಕು ಅಧ್ಯಕ್ಷರಾಗಿ ವೀರೇಶ ಕೆ.ಹಂಚಿನಾಳ, ಉಪಾಧ್ಯಕ್ಷರಾಗಿ ಬಿ.ನಾಗರಾಜ ಹೊಸಹಳ್ಳಿ ಕೆ, ಕುಬೇರಪ್ಪ ಹೊಸಹಳ್ಳಿ ಕೆ, ಕಾರ್ಯಾಧ್ಯಕ್ಷರಾಗಿ ಶಂಕ್ರಪ್ಪ ಜಾಲಿಹಾಳ, ಪ್ರಧಾನ ಕಾರ್ಯದರ್ಶಿಯಾಗಿ ಮಾರೆಪ್ಪ ರಾಮತ್ನಾಳ್, ಕೆ.ಯಂಕಪ್ಪ ಚನ್ನಳ್ಳಿ, ಕಾರ್ಯದರ್ಶಿಯಾಗಿ ಶ್ರೀಧರ ಬಾದರ್ಲಿ, ಹನುಮಂತ ಮಲ್ಲಾಪುರ, ಸಹ ಕಾರ್ಯದರ್ಶಿಯಾಗಿ ವೀರೇಶ ಸುಲ್ತಾನಪುರ, ಯಮನೂರು ಚನ್ನಳ್ಳಿ,



ಖಜಾಂಚಿಯಾಗಿ ಶಿವಕುಮಾರ ಮಲ್ಲಾಪುರ, ಕಾಶಿನಾಥ ಚನ್ನಳ್ಳಿ, ಕಾನೂನು ಸಲಹೆಗಾರರಾಗಿ ಹನುಮಂತಪ್ಪ ಮಲ್ಲಯ್ಯಕ್ಯಾಂಪ್, ಹಾಗೂ ಮಾಧ್ಯಮ ಸಲಹೆಗಾರರಾಗಿ ದುಗ್ಗಪ್ಪ ಮಲ್ಲಾಪುರ ಮತ್ತು ಶರಣಬಸವ ಚನ್ನಳ್ಳಿ ಆಯ್ಕೆಗೊಂಡಿದ್ದಾರೆ.

## ಜಾಫರ ಮೊಹಿಯುದ್ದೀನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅವರಿಗೆ ಫೆಡರಲ ಶಿಕ್ಷಣ ಸಂಸ್ಥೆಯಲ್ಲಿ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್

ಸಮಾಜ ಸೇವಕ, ಕಿರುತೆರೆ ಕಲಾವಿದ ನಿರ್ದೇಶಕ ಮತ್ತು ಜಾತ್ಯತೀತ ನಿಲುವಿನ ಜಫರ ಮೊಹಿಯುದ್ದೀನ ಇವ–ರಿಗೆ ಪ್ರತಿಷ್ಠಿತ ಫೆಡರಲ ಶಿಕ್ಷಣ ಸಂಸ್ಥೆ ವತಿಯಿಂದ ಇಂದು ಶಿಕ್ಷಣ ಸಂಸ್ಥೆಯಲ್ಲಿ ಆತ್ಮೀಯವಾಗಿ ಸನ್ಮಾನ ಮಾಡಲಾಯಿತು.

ಶಾಲು ಹೊಧಿಸಿ ಹೂಮಾಲೆ ಹಾಕಿ,ಪುಷ್ಪ ತಾಂಬೂಲ ನೀಡಿ ಸತ್ಕ–ರಿಸಿದರು. ಸಾಮಾಜಿಕ ಚಟುವಟಿ–ಕೆ ಬರಹದಲ್ಲಿ ಮತ್ತು ಜನರಿಗೆ ಉತ್ತಮ ಸಂದೇಶ ನೀಡುವಲ್ಲಿ ಸದಾ ನಿರತರಾಗಿರುತ್ತಾರೆ ಎಂದರು. ಶಾಲಾ ಮಕ್ಕಳು ಸದಾ ಓದಿನತ್ತ ಗಮನ ಹ–ರಿಸಬೇಕು. ಓದಿದ ಶಿಕ್ಷಣ ಸಂಸ್ಥೆಗೆ ಜಿಲ್ಲೆಗೆ



ರಾಜ್ಯಕ್ಕೆ ಕೀರ್ತಿ ತರಬೇಕು ಎಂದರು. ಇದೇ ಸಂದರ್ಭದಲ್ಲಿ ಜಫರ್ ಅವರು ಈಡಿಯಲ್ಲಿ ಭಾಗವಹಿಸಿ ಪ್ರತಿಬಿಂಬದ ಕ್ರೀಡಾಪಟುಗಳಿಗೆ ಬಹುಮಾನ ವಿತ–ರಿಸಿದರು. ಸಂದರ್ಭದಲ್ಲಿ ಅಕ್ಬರ್ ಮೊಹಿಯುದ್ದೀವ, ಮೊಹಮದ ಎಕ್ಬಾಲ್, ಎಜಾಜ್ ಮತ್ತು ಶಿಕ್ಷಣ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕಿ ಶ್ರೀಲೇಖ ಮತ್ತು ಶಿಕ್ಷಣ ಸಂಸ್ಥೆ ಸಿಬ್ಬಂದಿಗಳಿದ್ದರು.

## ವಿಶ್ವದ ಅನೇಕ ದೇಶಗಳಲ್ಲಿ ಆಯುರ್ವೇದ ವೈದ್ಯ ಪದ್ದತಿ ಪ್ರಚಾರದಲ್ಲಿದೆ: ಡಾ.ವೀರಭದ್ರಗೌಡ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಕಲ್ಮಠದ ಪೂಜ್ಯ ಶ್ರೀ ವಿರೂಪಾಕ್ಷ ಶಿವಾಚಾರ್ಯ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಹಾಗೂ ಆಸ್ಪತ್ರೆ ಸಭಾಂಗಣದಲ್ಲಿ 2025–26 ತಂಡದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗಾಗಿ ಅಯುರ್ ಪ್ರವೇಶಿಕ ಪಠ್ಯಕ್ರಮ ಕಾರ್ಯಕ್ರಮವನ್ನು ಕೆರೆಬಿಯನ್ ಸೆಂಟ್ ಕೀಟ್ಸ್ ಐಲ್ಯಾಂಡಿನ ಯೂನಿವರ್ಸಿಟಿ ಆಫ್ ಮೆಡಿಕಲ್ ಹೆಲ್ತ್ ಸೈನ್ಸ್ ಫಾರ್ಮಕಾಲಾಜೀ ಪ್ರೋಪೆಸರ್ ಡಾ.ವೀರಭದ್ರಗೌಡ ಉದ್ಘಾಟಿಸಿ ಮಾತನಾಡಿ ಇಂದು ವಿಶ್ವದ ಅನೇಕ ದೇಶಗಳಲ್ಲಿ ನಮ್ಮ ದೇಶದ ವೈದ್ಯ ಪದ್ದತಿ ಆಯುರ್ವೇದ ವೈದ್ಯ ಪದ್ಧತಿಯನ್ನು ಇತರ ವೈದ್ಯ ಪದ್ಧತಿಯ ಜೋತೆಯಲ್ಲಿ ಸಮ್ಮಿಳನಗೊಳ್ಳಿಸಿ ಚಿಕಿತ್ಸೆ ನೀಡುವ ಪದ್ಧತಿ ಆಚ–ರಣೆಯಲ್ಲಿದ್ದು ಉತ್ತಮ ಫಾಲಿತಾಂಶ ನೀಡುತ್ತಿರುವುದ–ರಿಂದ ಮುಂದಿನ ದಿನಗಳಲ್ಲಿ ಆಯುರ್ವೇದ ವೈದ್ಯರಿಗೆ ಹೆಚ್ಚಿನ ಬೇಡಿಕೆ ದೊರೆಯಲಿದೆ.

ಆಯುರ್ವೇದ ವೈದ್ಯರು ನಿರಂತರವಾಗಿ



ತಮ್ಮ ಚಿಕಿತ್ಸ ಪದ್ದತಿಯನ್ನು ಸುಧಾರಿಸಿಕೊಂಡು ಹೆಚ್ಚಿನ ಸಂಶೋಧನೆಯಲ್ಲಿ ತೊಡಗಿಕೊಂಡಾಗ ಮಾತ್ರ ಉತ್ತಮವಾದ ಫಲಿತಾಂಶವನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳೆ ಒಬ್ಬರಿಗೊಬ್ಬರು ಕಲಿಸುತ್ತ ಕಲಿತಾಗ ಮಾತ್ರ ಹೆಚ್ಚಿನ ಫಲಿತಾಂಶ ಬರುವುದಕ್ಕೆ ಸಾಧ್ಯ ನಮ್ಮ ಭಾರತೀಯ ಪರಂಪರೆಯಲ್ಲಿ ವೈದ್ಯರನ್ನು ಹಾಗೂ ಗುರುಗಳನ್ನು ದೇವರ ಸ್ಥಾನದಲ್ಲಿ ನೋಡಲಾಗುತ್ತದೆ. ವೈದ್ಯ ವೃತ್ತಿ ಅತ್ಯಂತ ಪವಿತ್ರವಾದ ವೃತ್ತಿಯಾಗಿದ್ದು ಅಂತಹ ವೃತ್ತಿಯನ್ನು ಅಯ್ದುಕೊಂಡಿರುವ ವೈದ್ಯ ವಿದ್ಯಾರ್ಥಿಗಳು ಉತ್ತಮ ವೈದ್ಯರಾಗಲು ನಿಮ್ಮಲ್ಲಿ ಈಗಿನಿಂದಲೇ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ವೈದ್ಯವೃತ್ತಿಯಲ್ಲಿ ಶ್ರದ್ದೆ ಮತ್ತು ಪ್ರಾಮಾಣಿಕತೆಯನ್ನು ರೂಡಿಸಿಕೊಳ್ಳಬೇಕು ಯಾವುದೇ ಕೇಲಸವನ್ನು ಇಷ್ಟ ಪಟ್ಟು ಖುಷಿಯಿಂದ ಮಾಡಿದಾಗ ಮಾತ್ರ ಯಶಸ್ಸನ್ನು ಪಡಯುವುದಕ್ಕೆ ಸಾಧ್ಯವಾಗುತ್ತದೆ.

ವಿದೇಶಗಳಲ್ಲಿ ವೈದ್ಯ ಶಿಕ್ಷಣ ಪಡೆಯುವುದಕ್ಕೆ ಅನೇಕ ಅವಕಾಶಗಳಿವೇ ಅದರೆ ವಿದೇಶಗಳಲ್ಲಿ ವೈದ್ಯಕೀಯ ಶಿಕ್ಷಣದ ಅವಧಿ ದೀರ್ಘವಾದಿ ಮತ್ತು ಶಿಕ್ಷಣ ಕ್ರಮಗಳು ವಿಭಿನವಾಗಿರುತ್ತವೆ. ಕೇಲವು ವಿದೇಶಿ ವೈದ್ಯಾಕೀಯ ವಿದ್ಯಾಲಯಗಳು ಭಾರತದಲ್ಲಿ ತಮ್ಮ ಶಾಖೆಗಳ ಮೂಲಕ ವೈದ್ಯಶಿಕ್ಷಣವನ್ನು ಕೂಡ ನೀಡುತ್ತಿವೆ ಎಂದು ತಿಳಿಸಿದರು. ಕಾಲೇಜಿನ ಪ್ರಾಚಾರ್ಯರಾದ ಡಾ.ಜೀವನೇಶ್ವರಯ್ಯ ಮಾತನಾಡಿ ಸರ್ಕಾರವು 2001ರಿಂದ ಬಿ.ಎ.ಎಂ. ಎಸ್. ವೈದ್ಯಕೀಯ ಪದವಿ ಪಡೆಯುವ ಪ್ರಥ–ಮ ವರ್ಷದ ವೈದ್ಯ ವಿದ್ಯಾರ್ಥಿಗಳಿಗೆ ಆಯುರ್ವೇದ ವೈದ್ಯ ಪದ್ದತಿಯನ್ನು ಸರಳವಾಗಿ ಪರಿಚಯಿಸುವ ಉದ್ದೇಶದಿಂದ ಅಯುರ್ ಪ್ರವೇಶಿಕ ಪಠ್ಯಕ್ರಮವನ್ನು ಪ್ರಾರಂಭಿಸಿದೆ.

ಕೇಂದ್ರ ಸರ್ಕಾರ ನಮ್ಮ ಪ್ರಾಚೀನ ವೈದ್ಯ ಪದ್ದತಿಗೆ ಹೆಚ್ಚಿನ ಪ್ರಮುಖ್ಯತೆಯನ್ನು ನೀಡಿದ್ದು ಪ್ರತ್ಯಕವಾದ ಸಚಿವಲಾಯವನ್ನೆ ಪ್ರಾರಂಭಿಸಿದೆ ಇಂದು ವಿಶ್ವದ ಹೆಚ್ಚಿನ ದೇಶಗಳಲ್ಲಿ ಆಯುರ್ವೇದ ವೈದ್ಯ ಪದ್ದತಿ ಹೆಚ್ಚಿನ ಜನಪ್ರಿಯವಾಗುತ್ತಿರುವುದ–ರಿಂದ ಮುಂದಿನ ದಿನಗಳಲ್ಲಿ ಆಯುರ್ವೇದ ವೈದ್ಯರಿಗೆ ಹೆಚ್ಚಿನ ಅವಕಾಶ ದೊರೆಯಲಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಆಡಳಿತಾಧಿಕಾ–ರಿಗಳಾದ ವಿಶ್ವರಾಧ್ಯಸ್ವಾಮಿ, ಉಮಶಂಕರ.ಹೆಚ್. ಉಪಾ ಪ್ರಾಚಾರ್ಯರಾದ ಡಾ.ಸುಮಂಗಲ ಹೆಚ್.ಎಂ. ಪ್ರಾಧ್ಯಪಕರಾದ ಡಾ.ನಾರಾಯಣ, ಡಾ.ಹಿರೇಮಠ ಶಿವರಾಜ ಒಡೆಯರ್,ಸಹಾಯಕ ಪ್ರಾಧ್ಯಪಕರಾದ ಡಾ.ರಮ್ಯ ಎ.ಕೆ. ಡಾ.ಅಂಜುಮಾ ಪರ್ವಿನ್, ಸೇರಿದಂತೆ ಆಯುರ್ವೇದ ಕಾಲೇಜಿನ ಪ್ರಾಧ್ಯಪಕರು,ವೈದ್ಯ ವಿದ್ಯಾರ್ಥಿಗಳು ಇದ್ದರು.

## ಸಾಹಿತ್ಯ ಸಿಂಚನ

ಓ ನನ್ನ ದಲಿತ ಸೂರ್ಯನೆ
ನೀ ಕೆಸರಿನಲಿ ಹುಟ್ಟಿದ ಕಮಲದಂತೆ ಹೊಂಬೆಳಕನು
ನೀಡಿದ ಧೀಮಂತ ನೀ

ನೊಂದು ಬೆಂದವರ ಆಶಾಕಿರಣ ನೀ ದೀನ ದಲಿತರ
ಸ್ಫೂರ್ತಿಯ ಸೆಲೆ ನೀ ಬಡ ಬಗ್ಗರ ಸಿರಿಯ ನೆಲೆ ನೀ
ಅನ್ಯಾಯ, ಶೋಷಣೆ, ದೌರ್ಜನ್ಯಗಳಿಗೆ ಉತ್ತರ ನೀ

ಶಿಕ್ಷಣ – ಸಂಘಟನೆ – ಹೋರಾಟದ ಮಂತ್ರಗಳ
ಕರ್ತೃ ನೀನು ಸಂವಿಧಾನವನ್ನು ಕಟ್ಟಿಕೊಟ್ಟ ಜ್ಞಾನ
ಸಿಂಧು ನೀನು.

ಎಚ್ ಎಫ್ ಮಸ್ಕಿ

## ಇಂದು ಐತಿಹಾಸಿಕ ಮಸ್ಕಿ ಮಲ್ಲಿಕಾರ್ಜುನ ದೇವರ ಕಾರ್ತೀಕೋತ್ಸವ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದ ಐತಿಹಾಸಿಕ ಶ್ರೀ ಮಲ್ಲಿಕಾರ್ಜುನ ದೇವರಿಗೆ ಮಂಗಳವಾರ ಬೆಳಿಗ್ಗೆ ಕಾರ್ತೀಕ ದೀಪೋತ್ಸವ ಅಂಗವಾಗಿ ಶ್ರೀ ಮಲ್ಲಿಕಾರ್ಜುನ ದೇವರ ರುದ್ರಾಭಿಷೇಕ ಸೇರಿದಂತೆ ಪೂಜೆ ಕೈಂಕರ್ಯ ಗಳು ಜರುಗುತ್ತದೆ. ನಂತರ ಸಾಯಂಕಾಲ 6ಕ್ಕೆ ಕಾರ್ತೀಕ ದೀಪೋತ್ಸವದ ದೀಪಾರಾಧನೆ ಗಚ್ಚಿನಮಠದ ಶ್ರೀ ಗಳು ಚಾಲನೆ ನೀಡಲಿದ್ದಾರೆ.**



ನಂತರ ಭಕ್ತ ವೃಂದದವರಿಂದ ದೀಪೋತ್ಸವ ಜರುಗಲಿದೆ.ಈ ಎಲ್ಲಾ ಮಂಗಲಮಯ ಕಾರ್ಯಕ್ರಮದಲ್ಲಿ ಭಕ್ತಾದಿಗಳು ಭಾಗವಹಿಸಿ ಶ್ರೀ ಮಲ್ಲಿಕಾರ್ಜುನ ದೇವರ ಕೃಪೆಗೆ ಪಾತ್ರರಾಗ ಬೇಕು ಎಂದು ಮಲ್ಲಿಕಾರ್ಜುನ ದೇವರ ಅರ್ಚಕರಾದ ಸಿದ್ದಯ್ಯ ಹಿರೇಮಠ ರವರು ಹಾಗೂ ದೇವಸ್ಥಾನ ಸಮಿತಿ ಪತ್ರಿಕೆ ಪ್ರಕಟನೆ ಮೂಲಕ ಮನವಿ ಮಾಡಿದರು.

## ಕೃಷಿ ಉಪನಿರ್ದೇಶಕರ ಕಚೇರಿ ಸ್ಥಳಾಂತರ ವಿರೋಧಿಸಿ ಧರಣಿ ಆರಂಭ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ಪಟ್ಟಣದಿಂದ ಸಿಂಧನೂರಿಗೆ ಕೃಷಿ ಉಪ ನಿರ್ದೇಶಕರ ಕಚೇರಿ ಸ್ಥಳಾಂತರ ವಿರೋಧಿಸಿ ಕೃಷಿ ಕಚೇರಿ ಮುಂದೆ ಸೋಮವಾರ ಕರ್ನಾಟಕ ರೈತ ಸಂಘದ ಪದಾಧಿಕಾರಿಗಳು ಧರಣಿ ಆರಂಭಿಸಿದರು. ಲಿಂಗಸುಗೂರು ಕೃಷಿ ಉಪನಿರ್ದೇಶಕರ ಕಚೇರಿ ಸಿಂಧನೂರಿಗೆ ಸ್ಥಳಾಂತರ ಮಾಡಿ, 2024ರ ಅಗಸ್ಟ್19ರಂದು ಸರಕಾರದ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದರು.**



ಈಗ ಮತ್ತೆ ಕೃಷಿ ಉಪನಿರ್ದೇಶಕರು ಬೆಂಗಳೂರು ಇವರು, ಇಲ್ಲಿನ ಕೃಷಿ ಉಪನಿರ್ದೇಶಕರ ಕಚೇರಿ–2 ಹುದ್ದೆಗಳ ಸಮೇತ ಸ್ಥಳಾಂತರ ಮಾಡುವಂತೆ ಆದೇಶಿಸಿರುವುದು ಖಂಡನೀಯ, ಲಿಂಗಸುಗೂರು ಸಿಂಧನೂರಿನಿಂದ 90 ಕಿ.ಮೀ. ಅಂತರವಿದ್ದು, ತಾಲೂಕಿನಲ್ಲಿ ಹೆಚ್ಚು ಕೃಷಿ ಭೂಮಿ ಇದೆ ಎಂದು ಸರಕಾರಕ್ಕೆ ಸುಳ್ಳು ಮಾಹಿತಿ ನೀಡಿ ಕಚೇರಿ ಸ್ಥಳಾಂತರಕ್ಕೆ ಹುನ್ನಾರ ನಡೆದಿದೆ. ಈ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಸ್ಪಂದನೆ ಸಿಗುತ್ತಿಲ್ಲ. ನಿರಂತರವಾಗಿ ನಡೆಯುವ ಹೋರಾಟ ಸರಕಾರದಿಂದ ಆದೇಶ ಬರುವವರೆಗೂ ನಿಲ್ಲುವುದಿಲ್ಲ ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿಸಂಘದ ಜಿಲ್ಲಾಧ್ಯಕ್ಷ ಶಿವಪುತ್ರಗೌಡ ನಂದಿಹಾಳ, ತಾಲೂಕ ಅಧ್ಯಕ್ಷ ದುರ್ಗಾಪ್ರಸಾದ, ಮುಖಂಡರಾದ ಮಹ್ಮದ್ ಖಾಜಾಸಾಬ, ದುರುಗಪ್ಪ, ಬಸಣ್ಣ ಕೋತ, ಲಾಲ್‌ಸಾಬ, ಲಕ್ಷ್ಮಣ, ರಮೇಶ, ಮಹಾಂತೇಶ ಸೇರಿ ಇತರರಿದ್ದರು.

# ಜಿಲ್ಲೆಗೆ ಏಮ್ಸ್ ಮಂಜೂರು ಮಾಡಿಸುವಲ್ಲಿ ರಾಜ್ಯದ ಕೇಂದ್ರ ಸಚಿವರು ವಿಫಲರಾಗಿದ್ದಾರೆ :ಅಶೋಕ ಕುಮಾರ ಜೈನ್

❑ ನೈಜ್ಯ ದೆಸೆ ನ್ಯೂಸ್



**ಮಾನ್ವಿ: ಪಟ್ಟಣದ ತಾ.ಪಂ. ಸಭಾಂಗಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ ಶೆಟ್ಟಿ ಬಣ ತಾಲೂಕು ಘಟಕದಿಂದ ಹಮ್ಮಿಕೊಂಡ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಕರವೇ.ಜಿಲ್ಲಾಧ್ಯಕ್ಷ ಅಶೋಕ ಕುಮಾರ ಜೈನ್ ಮಾತನಾಡಿ ಜಿಲ್ಲೆಯಲ್ಲಿ ಕರವೇ ವತಿಯಿಂದ ನಿರಂತರವಾಗಿ ಸರ್ಕಾರಿ ಶಾಲೆಗಳ ಅಭಿವೃದ್ದಿಗಾಗಿ ಅಗತ್ಯವಿರುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಹಾಗೂ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೂಡ ವಿತರಿಸಲಾಗುತ್ತಿದೆ.**

ವಿವಿಧ ಸ್ಪರ್ಧೇಗಳನ್ನು ಅಯೋಜಿಸುವ ಮೂಲಕ ಮಕ್ಕಳಿಗೆ ಪ್ರೋತ್ಸಾಹವನ್ನು ನೀಡುತ್ತ ಬಂದಿದೇವೆ. ಕಲ್ಯಾಣ ಕರ್ನಾಟಕದ ಅತ್ಯಂತ ಹಿಂದುಳಿದ ಜಿಲ್ಲೆಯಾಗಿರುವ ರಾಯಚೂರು ಜಿಲ್ಲೆಯ ಜನರಿಗೆ ಉತ್ತಮವಾದ ಆರೋಗ್ಯಕ್ಕಾಗಿ ಏಮ್ಸ್ ವೈದ್ಯಾಕೀಯ ಸಂಸ್ಥೆಯನ್ನು ಸ್ಥಾಪಿಸುವಂತೆ 1300 ದಿನಗಳಿಂದ ಸುಧಿರ್ಘವಾಗಿ ಜಿಲ್ಲೆಯ ಸಂಘ ಸಂಸ್ಥೆಗಳು ಹೋರಾಟ ನಡೆಸುತ್ತ ಬಂದಿದೇವೆ ಹಾಗೂ ರಾಜ್ಯ ಸರ್ಕಾರ ಕೂಡ ಕೇಂದ್ರಕ್ಕೆ ಈ ಕುರಿತು ನಾಲ್ಕು ಬಾರಿ ಪತ್ರ ಬರೆದಿದ್ದರು ಕೂಡ ಕೇಂದ್ರ ಸರ್ಕಾರ ಸ್ಪಂದಿಸದೆ ಇರುವುದರಿಂದ ಜಿಲ್ಲೆಗೆ ಆಗಮಿಸು ಕೇಂದ್ರ ಸಚಿವರ ವಿರುದ್ದ ಜಿಲ್ಲೆಯ ಎಲ್ಲಾ ಕನ್ನಡ ಪರ ಸಂಘಟನೆಗಳೊಂದಿಗೆ ತೀವ್ರವಾದ ಪ್ರತಿಭಟನೆಯನ್ನು ನಡೆಸಲಾಗುವುದು.ಎಂದು ತಿಳಿಸಿದರು.

ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಉಪನ್ಯಾಸಕರಾದ ಡಾ.ಚನ್ನಬಸವ ರವರು ಉಪನ್ಯಾಸ ನೀಡಿ ಕಾವೇರಿಯಿಂದ ಗೋದಾವರಿಯವರೆಗೂ ಹರಡಿರುವ ಭವ್ಯವಾದ ಕನ್ನಡನಾಡಿದ್ದು ನಮ್ಮ ಕನ್ನಡ ನಾಡನ್ನು ಅನೇಕ ಪ್ರಸಿದ್ದ ರಾಜ ಮಹಾರಾಜರು ಆಳ್ವಿಕೆ ಮಾಡಿ ಪ್ರಸಿದ್ದಿಯನ್ನು ಪಡೆದಿದ್ದಾರೆ ಇಂತಹ ಭವ್ಯ ಇತಿಹಾಸವನ್ನು ನಾವು ನಮ್ಮ ಮಕ್ಕಳಿಗೆ ತಿಳಿಸಬೇಕಾಗಿದೆ. ಕನ್ನಡ ನಮಗೆ ನಿತ್ಯ ಅನ್ನ ನೀಡುವ ಭಾಷೆಯಾಗಿ ಬೆಳೆಯಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪಟ್ಟಣದ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಿಸಲಾಯಿತು ಹಾಗೂ ಕನ್ನಡ ರಾಜ್ಯೋತ್ಸವ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ರಾಯಚೂರಿನ ಜೂನಿಯರ್ ವಿಷ್ಣು ವರ್ಧನ್ ಖ್ಯಾತಿಯ ವಿಷ್ಣು ನಾರಾಯಣಸ್ವಾಮಿ ವಿವಿಧ ಹಾಡುಗಳಿಗೆ ನೃತ್ಯ ಪ್ರದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ಡಾ. ಬಸವರಾಜ ಸುಂಕೇಶ್ವರ ಉಪನ್ಯಾಸಕರು, ಕರವೇ ರಾಜ್ಯ ಉಪಾಧ್ಯಕ್ಷರಾದ ಹರೀಷ್ ಸಿಂಗ್, ಡಾ.ಪವನ್ ಕುಮಾರ ದಾನಿ, ಡಾ.ದೇವರಾಜ ವರ್ಮ,ಕ್ರಾಂತಿ ಯಾದವ್. ತಾ.ಪಂ. ವ್ಯವಸ್ಥಪಕರಾದ ಬಸವರಾಜ, ಸುಭಾನ್ ಬೇಗ್,ಚೇತನ ಸಿಂಗ್ ವಕೀಲರು, ಚಂದ್ರಕಾಲ ವಕೀಲರು, ಕರವೇ ತಾ.ಅಧ್ಯಕ್ಷರಾದ ನರಸಿಂಹ, ಗೌ.ಅಧ್ಯಕ್ಷರಾದ ಯಲ್ಲಪ್ಪ ನಿಲಾಗಲ್, ದೀಪಕ್ ಯಾದವ್ ಸೇರಿದಂತೆ ಇನ್ನಿತರರು ಇದ್ದರು.

# ವಿಶ್ವಕರ್ಮ ಸಮಾಜದ ಜಿಲ್ಲಾಧ್ಯಕ್ಷರಾಗಿ ಮೌನೇಶ ಸಾಲವಾಡಗಿ ಬಳಗಾನೂರ ನೇಮಕ



❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರ: ಕರ್ನಾಟಕ ರಾಜ್ಯ ವಿಶ್ವಕರ್ಮ ಸಮಾಜದ ರಾಯಚೂರು ಜಿಲ್ಲಾ ಅಧ್ಯಕ್ಷರಾಗಿ ಮೌನೇಶ್ ವಿಶ್ವಕರ್ಮ ಸಾಲವಾಡಗಿ** ಬಳಗಾನೂರ ನೇಮಕಗೊಂಡಿದ್ದಾರೆ. ಇವರು ಇಂದು ಬೆಂಗಳೂರಿನ ಶೇಷಾದ್ರಿಪುರಂದಲ್ಲಿರುವ ವಿಶ್ವಕರ್ಮ ಸಮಾಜದ ಸಭಾಭವನದಲ್ಲಿ ರಾಜ್ಯಮಟ್ಟದ ಸಭೆಯಲ್ಲಿ ಇಂದು ಸರ್ವಾಧಿ ಮತದಿಂದ ರಾಯಚೂರು ಜಿಲ್ಲೆಗೆ



**ಜಿಲ್ಲಾಧ್ಯಕ್ಷರನ್ನಾಗಿ ಸಂಘಟನೆಯಿಂದ ಮೌನೇಶ್ ಅವರನ್ನು ಆಯ್ಕೆ ಮಾಡಲಾಗಿದೆ.**

ರಾಜ್ಯಾಧ್ಯಕ್ಷರಾದ ಈಶ್ವರ ಆಚಾರ ಮತ್ತು ಗೌರವ ಅಧ್ಯಕ್ಷರಾದ ಉಮೇಶ್ ರಾಮನಗರ ರಾಜ್ಯ ಪ್ರಧಾನ ಕಾರ್ಯದರ್ಶಿ ಶರತ್ ಚಂದ್ರ ಹಾಗೂ ಮಾಜಿ ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಬಾಬು ಪತ್ತಾರ .ಸತ್ಯವತಿ.. ರಾಮಚಂದ್ರ ಬಾಬು. ರಾಜ್ಯ ನಿರ್ದೇಶಕರಾದ ಅಂಬಣ್ಣ ಮಾನ್ವಿ ಮತ್ತು ಸಿಂಧನೂರಿನ ನಾಗರಾಜ್ ವಿಶ್ವಕರ್ಮ.ವೀರೇಶ್ ಆಚಾರ. ಪ್ರಭು ದೇವರ ಗುಡಿ. ಈ ಸಂದರ್ಭದಲ್ಲಿ ಭಾಗವಹಿಸಿದ್ದರು.

ಕಲ್ಯಾಣ ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ ರಾಯಚೂರು ಜಿಲ್ಲೆಗೆ ಅಧ್ಯಕ್ಷರನ್ನು ನೇಮಕ ಮಾಡಿ ಸಂಘಟನೆಯನ್ನು ಮಾಡಲು ಆದೇಶಿಸಿದ್ದು ವಿಶೇಷ. ಮೌನೇಶ ಸಾಲವಾಡಗಿ ರಾಯಚೂರು ಜಿಲ್ಲೆಯಲ್ಲಿ ಕಳೆದ 30 ವರ್ಷಗಳಿಂದ ಸಮಾಜ ಸಂಘಟನೆಯಲ್ಲಿ ಉತ್ತಮ ಕ್ರೀಯಶೀಲರಾಗಿದ್ದು ಈಗಾಗಲೇ ತಾಲೂಕಿನ ಮುಖಂಡರುಗಳು ಇವರನ್ನು ಜಿಲ್ಲಾಧ್ಯಕ್ಷರನ್ನಾಗಿ ಮಾಡಲು ಸಹಮತ ನೀಡಿದ್ದರು... ಇವರಿಗೆ ಬೆಂಗಳೂರಿನ ಶೇಷಾದ್ರಿಪುರಂನಲ್ಲಿರುವ ವಿಶ್ವಕರ್ಮ ಸಮಾಜದ ಸಭಾಭವನದಲ್ಲಿ ಆದೇಶ ಪತ್ರವನ್ನು ನೀಡಿ ಸನ್ಮಾನಿಸಿದರು.

# ಟಿಪ್ಪು ವಂಶಸ್ಥೆ ನೂರ್ ಇನಾಯತ್ ಖಾನ್ ಗೆ ಗೌರವಾರ್ಥವಾಗಿ ಅಂಚೆ ಚೀಟಿ ಬಿಡುಗಡೆ ಮಾಡಿದ ಫ್ರಾನ್ಸ್

❑ ನೈಜ್ಯ ದೆಸೆ ನ್ಯೂಸ್

**ಟಿಪ್ಪು ಸುಲ್ತಾನ್ ವಂಶಸ್ಥೆ, ಬ್ರಿಟಿಷ್ ಭಾರತೀಯ ಗೂಢಚಾರಿ ನೂರ್ ಇನಾಯತ್ ಖಾನ್ ಅವರು ಎರಡನೇ ಮಹಾಯುದ್ಧದ ಸಮಯದಲ್ಲಿ ಜರ್ಮನಿಯ ನಾಜಿಗಳ ವಿರುದ್ಧ ಹೋರಾಡಿದ ಕಾರಣಕ್ಕೆ ಫ್ರೆಂಚ್ ಅಂಚೆ ಸೇವೆಯು ನೂರ್ ಅವರ ಅಂಚೆಚೀಟಿ ಬಿಡುಗಡೆ ಮಾಡುವ ಮೂಲಕ ಗೌರವ ಸಲ್ಲಿಸಿದೆ.**

18ನೇ ಶತಮಾನದ ಮೈಸೂರು ದೊರೆ ಟಿಪ್ಪು ಸುಲ್ತಾನನ ವಂಶಸ್ಥೆಯಾಗಿರುವ ನೂರ್ ಇನಾಯತ್ ಖಾನ್, ಎರಡನೇ ಮಹಾಯುದ್ಧದ ಸಮಯದಲ್ಲಿ ಗುಪ್ತ ಬ್ರಿಟಿಷ್ ಏಜೆಂಟ್ ಆಗಿ ಫ್ರೆಂಚ್ ಪ್ರತಿರೋಧದಲ್ಲಿ ವಹಿಸಿದ ಪಾತ್ರಕ್ಕಾಗಿ ಫ್ರಾನ್ಸ್ ಸ್ಮರಣಾರ್ಥ ಅಂಚೆ ಚೀಟಿಯೊಂದಿಗೆ ಗೌರವಿಸಲ್ಪಟ್ಟ ಏಕೈಕ ಭಾರತೀಯ ಮೂಲದ ಮಹಿಳೆಯಾಗಿದ್ದಾರೆ.



ಫ್ರೆಂಚ್ ಅಂಚೆ ಸೇವೆ, ಲಾ ಪೋಸ್ಟೆ, ನಾಜಿ ಜರ್ಮನಿಯ ವಿರುದ್ಧ ಹೋರಾಡಿದ "ಪ್ರತಿರೋಧದ ವ್ಯಕ್ತಿಗಳ" ಗೌರವಾರ್ಥವಾಗಿ ಬಿಡುಗಡೆ ಮಾಡಲಾದ ಅಂಚೆಚೀಟಿಯೊಂದಿಗೆ ನೂರ್ ಅವರನ್ನು ಗೌರವಿಸಿದೆ. ಎರಡನೇ ಮಹಾಯುದ್ಧದ 80 ವರ್ಷಗಳನ್ನು ಗುರುತಿಸಲು ಈ ತಿಂಗಳು ಬಿಡುಗಡೆ ಮಾಡಲಾದ ಅಂಚೆಚೀಟಿಗಳ ಸೆಟ್‌ನಲ್ಲಿ ಆಯ್ಕೆಯಾದ ಒಂದು ಡಜನ್ ಯುದ್ಧ ವೀರರು ಮತ್ತು ನಾಯಕಿಯರಲ್ಲಿ ಅವರು ಒಬ್ಬರು.

"ಯುದ್ಧದ ಅಂತ್ಯದ 80 ನೇ ಮಹತ್ವದ ವಾರ್ಷಿಕೋತ್ಸವದಂದು ಫ್ರಾನ್ಸ್ ನೂರ್ ಇನಾಯತ್ ಖಾನ್ ಅವರಿಗೆ ಅಂಚೆ ಚೀಟಿ ನೀಡಿ ಗೌರವಿಸಿರುವುದು ನನಗೆ ಸಂತೋಷ ತಂದಿದೆ" ಎಂದು ನೂರ್ ಅವರ ಜೀವನ ಚರಿತ್ರೆ ? 'ಸ್ಪೈ ಪ್ರಿನ್ಸೆಸ್: ದಿ ಲೈಫ್ ಆಫ್ ನೂರ್ ಇನಾಯತ್ ಖಾನ್' ನ ಲಂಡನ್ ಮೂಲದ ಲೇಖಕಿ ಶ್ರಬಾನಿ ಬಸು ಹೇಳಿದ್ದಾರೆ. "ನೂರ್ ಫ್ಯಾಸಿಸಂ ವಿರುದ್ಧದ ಹೋರಾಟದಲ್ಲಿ ತನ್ನ ಪ್ರಾಣವನ್ನು ತ್ಯಾಗ ಮಾಡಿದಳು. ಅವಳು ಪ್ಯಾರಿಸ್‌ನಲ್ಲಿ ಬೆಳೆದಳು, ಇಂಗ್ಲೆಂಡ್‌ನಲ್ಲಿ ಯುದ್ಧ ಪ್ರಯತ್ನದಲ್ಲಿ ಸೇರಿಕೊಂಡಳು, ಮತ್ತು ಫ್ರಾನ್ಸ್‌ನಲ್ಲಿ ಸಾಮಾನ್ಯ ಜನರು ಪೋಸ್ಟ್ ಮಾಡುವ ಅಂಚೆ ಚೀಟಿಯಲ್ಲಿ ಅವಳ ಮುಖವನ್ನು ನೋಡುವುದು ಅದ್ಭುತವಾಗಿದೆ," ಎಂದು ಅವರು ಹೇಳಿದರು.

ಪ್ರತಿಯೊಂದು ಅಂಚೆಚೀಟಿ ಛಾಯಾಚಿತ್ರದಿಂದ ತೆಗೆದ ಕೆತ್ತನೆಯ ರೂಪದಲ್ಲಿದ್ದು, ನೂರ್ ಅವರ ಮೇಲಿನ ಅಂಚೆಚೀಟಿ ಅವರ ಬ್ರಿಟಿಷ್ ಮಹಿಳಾ ಸಹಾಯಕ ವಾಯುಪಡೆ (WAAF) ಸಮವಸ್ತ್ರವನ್ನು ಪ್ರದರ್ಶಿಸುತ್ತದೆ. "ನೂರ್ ಅವರ ಜನ್ಮ ಶತಮಾನೋತ್ಸವದ ನೆನಪಿಗಾಗಿ ಬ್ರಿಟನ್ 2014 ರಲ್ಲಿ ಅವರನ್ನು ಗೌರವಿಸಿತು. ಈಗ ಬ್ರಿಟನ್ ಮತ್ತು ಫ್ರಾನ್ಸ್ ಅವರ ಗೌರವಾರ್ಥವಾಗಿ ಅಂಚೆಚೀಟಿ ಹೊರಡಿಸಿವೆ. ಅವರ ಪೂರ್ವಜರ ದೇಶವಾದ ಭಾರತವು ಕೂಡ ಅಂಚೆಚೀಟಿಯೊಂದಿಗೆ ಅವರನ್ನು ಗೌರವಿಸುವ ಸಮಯ ಬಂದಿದೆ" ಎಂದು ಹೇಳಿದ್ದಾರೆ.

# ಲಿಂಗಸೂಗೂರ ತಾಲೂಕಿನಲ್ಲಿ ಅದ್ದೂರಿ ಹೈನುಗಾರಿಕೆ ಪ್ರಾರಂಭ–ಹೈನುಗಾರಿಕೆಗೆ ಮುಂದಾಗಿರುವ NRLM ಸ್ವ ಸಹಾಯ ಗುಂಪಿನ ಮಹಿಳೆಯರು

❑ ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ಹೈನುಗಾರಿಕೆ ಒಂದು ಪ್ರಮುಖ ಉಪಕಸುಬಾಗಿದ್ದು, ಇದರಿಂದ ದಿನನಿತ್ಯ ಆದಾಯಗಳಿಸಲು ಸಾಧ್ಯವಾಗುತ್ತದೆ. ಇತ್ತೀಚೀನ ದಿನಗಳಲ್ಲಿ ಹಲವಾರು ಯುವಕರ ಆಸಕ್ತಿಯಂತೆ ಮಹಿಳೆಯರು ಕೂಡ ಹೈನುಗಾರಿಕೆ ಮಾಡಲು ತಾಲೂಕು ಪಂಚಾಯತ ವ್ಯಾಪ್ತಿಯ ಸಂಜೀವಿನಿ–ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಯೋಜನೆ ಅಡಿಯಲ್ಲಿರುವ ಸ್ವ ಸಹಾಯ ಗುಂಪಿನ ಮಹಿಳೆಯರು ಹೈನುಗಾರಿಕೆ ಪ್ರಾರಂಭ ಮಾಡಲು ಮುಂದಾಗಿರುವುದು ವಿಶೇಷವಾಗಿರುತ್ತದೆ.**

ಲಿಂಗಸೂಗೂರ ತಾಲೂಕಿನದ್ಯಾಂತ ಸುಮಾರು 50–60 ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘ ರಚನೆ, 1500 ರಿಂದ 2000 ರವರಿಗೆ ಹಸುಗಳು ಖರೀದಿಸುವ ಗುರಿಯಂತೆ ಸಂಜೀವಿನಿ ಗ್ರಾಮ ಪಂಚಾಯತ ಮಟ್ಟದ ಒಕ್ಕೂಟದ ಸ್ವ ಸಹಾಯ ಸಂಘದ ಮಹಿಳೆಯರಿಗೆ ಒಕ್ಕೂಟದಿಂದ ಸಮುದಾಯದ ಬಂಡವಾಳ ನಿಧಿ ಹಾಗೂ ಬ್ಯಾಂಕ್ ಸಾಲ ಸಂಪರ್ಕ



ಮೂಲಕ ಹಸುಗಳು ಖರೀದಿಸಿ ಸಂಪೂರ್ಣ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳುವುದು. ಗುಂತಗೋಳ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೆಳಕು ಸಂಜೀವಿನಿ ಗ್ರಾ.ಪಂ ಮಟ್ಟದ ಒಕ್ಕೂಟದ ಪರಿಮಳ ನರಸಮ್ಮ ಹಾಗೂ ದವಲಮಲ್ಲಿಕ ಗುಂಪಿನ ರುಕ್ಷನಬೇಗಂ, ಮುನಿರಾಬೇಗಂ, ಮಮತಾಜ್ ಬೇಗಂ ಹಸು ಖರೀದಿಸಿ ಸಾಕಾಣಿಕೆಯಲ್ಲಿ ತೊಡಗಿಸಿಕೊಂಡವರು.

ಇಲ್ಲಿನ ರೈತ ಮಹಿಳೆಯರು ಕೂಲಿ ಕೆಲಸದಲ್ಲಿ ಜೀವನ ನಡಿಸದೆ ಕಷ್ಟಕರವಾದಾಗ ಪಟ್ಟಣಕ್ಕೆ ಗುಳೆ ಹೋಗ್ಬೇಕೆನ್ನುವ ಇಂತಹ ಸಂದರ್ಭದಲ್ಲಿ ಸಂಜೀವಿನಿ ಯೋಜನೆ ಸಿಬ್ಬಂದಿಗಳು ಹೈನುಗಾರಿಕೆ ಮಾಹಿತಿ ನೀಡಿದಾಗ ಸ್ವಯಂ ಪ್ರೇರಿತರಾಗಿ ತಮ್ಮ ಅಲ್ಪ ಸ್ವಲ್ಪ ಅವರ ಕೃಷಿ ಜೊತೆ ಉಪಕಸುಬಾಗಿ ಹೈನುಗಾರಿಕೆ ಉದ್ಯಮ ಆರಂಭಿಸಲು ಮುಂದಾದರು. ಹಸು ಆಯ್ಕೆ: ಸ್ಥಳೀಯ ಪರಿಸರಕ್ಕೆ ಹೊಂದಿಕೊಳ್ಳುವ ಮತ್ತು ಉತ್ತಮ ಹಾಲು ಉತ್ಪಾದಿಸುವ ಹಸುಗಳನ್ನು ಸ್ಥಳೀಯ ಪಶುವೈದ್ಯರ ಮಾಹಿತಿಯಂತೆ ಸೂಕ್ತ ತಳಿಗಳ ಬಗ್ಗೆ ಸಲಹೆ ಪಡೆದು ಎಮ್ಮೆಗಳನ್ನು ಖರೀದಿಸಲು ಮುಂದಾಗಿರುವುದು.

ಕೊಟ್ಟಿಗೆ ನಿರ್ಮಾಣ ಮತ್ತು ಆಕಗಳುಗಳ ಖರೀದಿ 2,00,000/–ಲಕ್ಷ ಬಂದಿದೆ, ಮೊದಲಿಗೆ ಐದು (5) ಹಾಲು ಹಿಂಡುವ ಆಕಳು ಮಿಶ್ರತಳಿಗಳನ್ನು ಖರೀದಿಸಿ ಇದರಿಂದ ಪ್ರತಿದಿನ ಹಾಲಿನ ಕೇಂದ್ರಕ್ಕೆ ಒಂದು ದಿನಕ್ಕೆ ಸುಮಾರು 20 ರಿಂದ 25 ಲೀಟರ ಹಾಲಿನ ಇಳುವರಿ ಪಡೆದು ಸರಾಸರಿ ಪ್ರತಿ ಲೀಟರಗೆ ರೂ. 40–45 ದರದಲ್ಲಿ ಮಾರಾಟ ಮಾಡುತ್ತಿದ್ದು, ಒಂದು ದಿನಕ್ಕೆ ರೂ. 1500 ರಿಂದ 2000 ರವರೆಗೆ ಆದಾಯ ಗಳಿಸುತ್ತಿದ್ದಾರೆ. ಅದರಲ್ಲಿ ಪಶು ಆಹಾರದ ಖರ್ಚು ಮತ್ತು ಔಷಧಿಯ ಖರ್ಚು ಸುಮಾರ ಶೇ. 50 ರಷ್ಟು ಬರುತ್ತದೆ ಎನ್ನುತ್ತಾರೆ ಅವರು. ಇವರ ಮನೆ ಸ್ವಂತಃ ಜಮೀನಿನಲ್ಲಿ ಇರುವುದರಿಂದ ತಾವೇ ತಮ್ಮ ಕುಟುಂಬದವರೊಂದಿಗೆ ಹಾಗೂ ಕೂಲಿ ಆಳುಗಳೊಂದಿಗೆ ಕೂಡಿ ಕೆಲಸ ಮಾಡುತ್ತಾರೆ. ಜಮೀನಿನ ಕೃಷಿಯ ತ್ಯಾಜ್ಯಗಳಾದ, ಗೋವಿನ ಜೋಳದ ನುಚ್ಚು, ತೊಗರಿ ನುಚ್ಚು, ಕಡಲೆ ನುಚ್ಚು, ಗೋದಿ ತವಡು ಉಪಯೋಗಿಸಿ, ದಾಣಿ ಮಿಶ್ರಣವನ್ನು ಮನೆಯಲ್ಲಿಯೇ ತಯಾರು ಮಾಡುತ್ತಾರೆ, ಹಸಿರು ಮೇವಿನ ಕೊರತೆಯಾಗದಂತೆ, ಹೊಲದಲ್ಲಿ ಹನಿ ನೀರಾವರಿ ತಂತ್ರಜ್ಞಾನ ಅಳವಡಿಸಿಕೊಂಡಿದ್ದಾರೆ. ಇವರ ಯಶಸ್ಸನ್ನು ನೋಡಿ ಈ ಪಂಚಾಯತ್ ವ್ಯಾಪ್ತಿಯ ಎಲ್ಲಾ ಮಹಿಳೆಯರು ಸಂಜೀವಿನಿ ಸ್ವ ಸಹಾಯ ಗುಂಪು ಸೇರಲು ಬಯಸಿ ಹಸುಗಳು ಖರೀದಿಗಾಗಿ ಸಾಲದ ಬೇಡಿಕೆ ಸಲ್ಲಿಸಿದ್ದಾರೆ.

## ನೇಮಕಾತಿ ಪ್ರಕಟಣೆ

NWKRTC ನೇಮಕಾತಿ 2025: 33 ಸಹಾಯಕ ಸಂಚಾರ ವ್ಯವಸ್ಥಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮವು ನವೆಂಬರ್ 2025 ರ NWKRTC ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ಸಂಚಾರ ವ್ಯವಸ್ಥಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 10–ಡಿಸೆಂಬರ್–2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಹುದ್ದೆಗಳ ಸಂಖ್ಯೆ, ಸಹಾಯಕ ಆಡಳಿತ ಅಧಿಕಾರಿ 2 ಸಹಾಯಕ ಲೆಕ್ಕಪತ್ರ ಅಧಿಕಾರಿ 2. ಸಹಾಯಕ ಕಾನೂನು ಅಧಿಕಾರಿ 6, ಸಹಾಯಕ ಕಾರ್ಮಿಕ ಕಲ್ಯಾಣ ಅಧಿಕಾರಿ 5,ಸಹಾಯಕ ಮೆಕ್ಯಾನಿಕಲ್ ಎಂಜಿನಿಯರ್ 8, ಸಹಾಯಕ ಸಂಚಾರ ವ್ಯವಸ್ಥಾಪಕ 10 ಹುದ್ದೆಯ ಹೆಸರು ಅರ್ಹತೆ ಸಹಾಯಕ ಆಡಳಿತಾಧಿಕಾರಿ ಸ್ನಾತಕೋತ್ತರ ಪದವಿ ಸಹಾಯಕ ಲೆಕ್ಕಪತ್ರ ಅಧಿಕಾರಿ ಬಿ.ಕಾಂ, ಸ್ನಾತಕೋತ್ತರ ಪದವಿ, ಎಂಬಿಎ ಸಹಾಯಕ ಕಾನೂನು ಅಧಿಕಾರಿ ಕಾನೂನು ಪದವಿ, ಎಲ್‌ಎಲ್‌ಬಿ, ಸಹಾಯಕ ಕಾರ್ಮಿಕ ಕಲ್ಯಾಣ ಅಧಿಕಾರಿ ಪದವಿ, ಸ್ನಾತಕೋತ್ತರ ಪದವಿ, ಎಂಎಸ್‌ಡಬ್ಲ್ಯೂ, ಸಹಾಯಕ ಮೆಕ್ಯಾನಿಕಲ್ ಎಂಜಿನಿಯರ್ ಪದವಿ, ಬಿಇ/ ಬಿ.ಟೆಕ್ ?ಸಹಾಯಕ ಸಂಚಾರ ವ್ಯವಸ್ಥಾಪಕ ಪದವಿ, ಸ್ನಾತಕೋತ್ತರ ಪದವಿ, ಎಂಎಸ್‌ಡಬ್ಲ್ಯೂ, ಎಂಬಿಎ Official Website: cetonline.karnataka.gov.in ಕೊನೆಯ ದಿನಾಂಕ: 10–ಡಿಸೆಂಬರ್–2025

## ನೆರೆಹೊರೆಯವರ ಹಕ್ಕುಗಳ ರಾಷ್ಟ್ರವ್ಯಾಪಿ ಅಭಿಯಾನ ಪರಿವಾರ ಸಮ್ಮೇಳನ ಯಶಸ್ವಿ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು, ನ.23: ನೆರೆಹೊರೆಯವರ ಹಕ್ಕುಗಳನ್ನು ಉತ್ತೇಜಿಸುವ ರಾಷ್ಟ್ರವ್ಯಾಪಿ ಅಭಿಯಾನದ ಭಾಗವಾಗಿ, ನೆರೆಹೊರೆಯ ಮಾದರಿ?ಮಾದರಿ ಸಮಾಜ ಕಾರ್ಯಕ್ರಮದ ಅಡಿಯಲ್ಲಿ 23–11–2025 ರಂದು ಮಿಲಾಪ್ ಶಾದಿ ಮಹಲ್‌ನಲ್ಲಿ ಜಮಾಅತೆ ಇಸ್ಲಾಮೀ ಬಂಧುಗಳ ಪರಿವಾರ ಸಮ್ಮೇಳನವನ್ನು ಭವ್ಯವಾಗಿ ಆಯೋಜಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮೌಲಾನಾ ಮುಜಫರ್ ಹುಸೇನ್ ನದ್ವಿ (ಚಿತ್ರದುರ್ಗ), ಸಯ್ಯದ್ ಮುಮ್ತಾಜ್ ಮನ್ಸೂರಿ, State President ? RIIFA, Chamber of Commerce ಆಗಮಿಸಿ ಅಮೂಲ್ಯವಾದ ಭಾಷಣ ನೀಡಿದರು ಕಾರ್ಯಕ್ರಮದಲ್ಲಿ ಜಮಾಅತೆ ಇಸ್ಲಾಮೀ ಹಿಂದ್ ಸ್ಥಾನೀಯ ಅಧ್ಯಕ್ಷ ಮೊಹಮ್ಮದ್






ಹುಸೇನ್, ರಕ್ಷಂದಾ ಫರೀನ್ ಸಾಹೇಬಾ ಭಟ್ಕಳ, ಮಹಿಳಾ ವಿಭಾಗದ ಅಧ್ಯಕ್ಷೆ ಸುಮ್ಮಯ್ಯ ಪರ್ವೀನ್, ಗರ್ಲ್ಸ್ ಇಸ್ಲಾಮಿಕ್ ಆರ್ಗನೈಸೇಷನ್ ಅಧ್ಯಕ್ಷೆ ನೇಹಾ ಸಮ್ರೀನ್ ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದರು ಈ ಕಾರ್ಯಕ್ರಮದ ಆಯೋಜಕರಾದ ನಯೀಮ್ ಪಾಷಾ ಚೌದ್ರಿ ಅವರು ಸಂಪೂರ್ಣ ಕಾರ್ಯಕ್ರಮವನ್ನು ಅತ್ಯಂತ ಅನುಶಾಸಿತವಾಗಿ ಮತ್ತು ಸಮರ್ಪಣೆಯಿಂದ ಆಗುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದರು.

ಕಾರ್ಯಕ್ರಮದ ಅಂತ್ಯದಲ್ಲಿ ಮುಖ್ಯ ಅತಿಥಿಗಳು ``Right of Neighbour'' ಬಗ್ಗೆ ಅತ್ಯಂತ ಮನಮುಟ್ಟುವ, ಆಳವಾದ ಹಾಗೂ ಉದ್ದವಾದ ಸಂದೇಶವನ್ನು ನೀಡಿದರು. ನೆರೆಹೊರೆಯವರ ಹಕ್ಕುಗಳು ಕೇವಲ ಒಬ್ಬೊಬ್ಬರ ಹೊಣೆಗಾರಿಕೆಯಾಗಿರದೇ,



ಸಮಗ್ರ ಸಮಾಜದ ಶಾಂತಿ ನಿರ್ಮಾಣದಲ್ಲಿ ಪ್ರಮುಖ ಆಧಾರಶಿಲೆಯಾಗಿದೆ ಎಂದು ಅವರು ವಿಶ್ಲೇಷಿಸಿದರು. ಒಬ್ಬನು ತನ್ನ ನೆರೆಹೊರೆಯವರ ಸುರಕ್ಷತೆ, ಗೌರವ, ಸುಖ ಸಮಾಧಾನ ಹಾಗೂ ಸಾಮಾಜಿಕ ಹಕ್ಕುಗಳನ್ನು ಕಾಪಾಡುವಾಗ, ಅದು samudaayada ನೈತಿಕ ಬಲವರ್ಧನೆಗೆ ಕಾರಣವಾಗುತ್ತದೆ ಎಂದು ವಿವರಿಸಿದರು. ನೆರೆಮನೆ ಸಂಬಂಧಗಳನ್ನು ಸುಧಾರಿಸಿದರೆ ದೇಶದ ಮಟ್ಟದಲ್ಲಿ ಸಹಬಾಳ್ವೆ, ಪರಸ್ಪರ ಗೌರವ ಮತ್ತು ಮಾನವೀಯತೆ ಬಲವಾಗುತ್ತದೆ ಎಂದು ಅರ್ಥಪೂರ್ಣವಾಗಿ ಸ್ಪಷ್ಟಪಡಿಸಿ, ಸಭಿಕರಲ್ಲಿ ದೀರ್ಘಕಾಲದ ಪ್ರೇರಣೆಯನ್ನು ಮೂಡಿಸಿದರು.

## M P. ಕುಮಾರ್ ನಾಯಕ್ ರಿಂದ ಭೂಮಿ ಪೂಜೆ

❏ ನೈಜ್ಯ ದೆಸೆ ನ್ಯೂಸ್

ಮಾನ್ವಿ ವಿಧಾನಸಭಾ ಕ್ಷೇತ್ರದ ಮರಾಠ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾರ್ಯ, ಸಿದ್ದರಾಮೇಶ್ವರ ದೇವಸ್ಥಾನ ಮುಂಭಾಗದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಸಚಿವರಾದ ಶ್ರೀ ಎನ್ ಎಸ್ ಬೋಸರಾಜು ಅವರೊಂದಿಗೆ ಭೂಮಿಪೂಜೆ ನೆರವೇರಿಸಿದೆ.



ಈ ಸಂದರ್ಭದಲ್ಲಿ ಶಾಸಕರಾದ ಶ್ರೀ ಹಂಪಯ್ಯ ಜಿ ನಾಯಕ ಅವರು, ತಹಶೀಲ್ದಾರರಾದ ಶ್ರೀ ಅಶೋಕ್ ಪವಾರ್ ಅವರು, ಕಾಂಗ್ರೆಸ್ ಮುಖಂಡರಾದ ಶ್ರೀ ಚುಕ್ಕಿ ಶಿವಕುಮಾರ್, ಶ್ರೀ ಬ್ರಿಜೇಶ್ ಪಾಟೀಲ್, ಶ್ರೀ ರಮೇಶ ದರ್ಶನಕರ್, ಶ್ರೀ ಆಜಿ ಖಾತ್ರಿ, ಶ್ರೀ ಹನುಮಂತ, ಶ್ರೀ ಶಿವಕುಮಾರ್ ಅರಕೇರಿ, ಶ್ರೀಮತಿ ರೇಣುಕಾ, ಶ್ರೀ ನಾಗಪ್ಪ, ಶ್ರೀ ಶ್ರೀನಿವಾಸ್, ಶ್ರೀ ಹನುಮಂತ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಕಲ್ಯಾಣ ಕರ್ನಾಟಕ ನಿವಾಸಿಗಳಿಗೆ ಶ್ರೀಮತಿ ಬಸವರಾಜೇಶ್ವರಿ ಅವರ ಕುಟುಂಬದಿಂದ ಉಚಿತ ಸಮಗ್ರ ಆರೋಗ್ಯ ಶಿಬಿರ




❏ ನೈಜ್ಯ ದೆಸೆ ನ್ಯೂಸ್

**ಕಲ್ಯಾಣ ಕರ್ನಾಟಕ ನಿವಾಸಿಗಳಿಗೆ ಶ್ರೀಮತಿ ಬಸವರಾಜೇಶ್ವರಿ ಅವರ ಕುಟುಂಬದಿಂದ ಉಚಿತ ಸಮಗ್ರ ಆರೋಗ್ಯ ಶಿಬಿರ* ರಾಯಚೂರು ಜಿಲ್ಲಾ ಲಿಂಗಸೂರು ತಾಲೂಕಿನ ಗೆಜ್ಜಲಗಟ್ಟ ಗ್ರಾಮದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸುಲಭವಾಗಿ ಲಭ್ಯವಾಗುವ ಮತ್ತು ಕೈಗೆಟುಕುವ ಆರೋಗ್ಯ ಸೇವೆಗಳ ತೀವ್ರ ಕೊರತೆ ಇದೆ.**

ವೈದ್ಯಕೀಯ ವೆಚ್ಚಗಳ ಹೆಚ್ಚಳ ಮತ್ತು ಸೂಕ್ತ ಮೂಲಸೌಕರ್ಯದ ಅಭಾವದ ಕಾರಣದಿಂದ, ಆರ್ಥಿಕವಾಗಿ ದುರ್ಬಲ ಕುಟುಂಬಗಳು ಅಗತ್ಯ ಚಿಕಿತ್ಸೆ ಪಡೆಯುವುದನ್ನು ತಪ್ಪಿಸಿಕೊಳ್ಳುವುದಾಗಿಯೂ ಅಥವಾ ಖಾಸಗಿ ಆಸ್ಪತ್ರೆಗಳ ಶೋಷಣೆಗೆ ಗುರಿಯಾಗುವುದಾಗಿಯೂ ಕಂಡುಬರುತ್ತಿದೆ. ಈ ತುರ್ತು ಅಗತ್ಯವನ್ನು ಗುರುತಿಸಿ, ಗೆಜ್ಜಲಗಟ್ಟ ಗ್ರಾಮದ ಧನಿ ಶ್ರೀ ಮಹೇಂದ್ರ ರಾಜ ಜಹಗೀರ್ದಾರ್ ?ಮಾಜಿ ಕೇಂದ್ರ ಸಚಿವರು ಹಾಗೂ ಸಂಸದರಾಗಿದ್ದ ಶ್ರೀಮತಿ ಬಸವರಾಜೇಶ್ವರಿ ಅವರ ಮೊಮ್ಮಗ?ಜನಸೇವೆಗೆ ಮಹತ್ವದ ಹೆಜ್ಜೆ ಇಟ್ಟಿದ್ದಾರೆ.

ಭಾರೀ ಮಾನವೀಯ ಪ್ರಯತ್ನದ ಅಂಗವಾಗಿ, ಶ್ರೀ ಮಹೇಂದ್ರ ರಾಜ ಜಹಗೀರ್ದಾರ್ ಅವರು "ಸಂಪೂರ್ಣ ಉಚಿತ ಆರೋಗ್ಯ ಶಿಬಿರ"ವನ್ನು ಆಯೋಜಿಸಿ, ಗೆಜ್ಜಲಗಟ್ಟ ಗ್ರಾಮದ 35?40 ಸ್ಥಳೀಯ ನಿವಾಸಿಗಳನ್ನು ಬಳ್ಳಾರಿ ಃಒಅ ಆಸ್ಪತ್ರೆಗೆ ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡಿದರು. ಫಲಾನುಭವಿಗಳು ರಕ್ತ ಪರೀಕ್ಷೆ, ಸ್ಕ್ಯಾನ್, ಎಕ್ಸ್–ರೇ ಸೇರಿದಂತೆ ಎಲ್ಲಾ ಅಗತ್ಯ ವೈದ್ಯಕೀಯ ತಪಾಸಣೆಗಳು ಹಾಗೂ ತಜ್ಞರ ಸಲಹೆಗಳನ್ನು ಪಡೆದರು. ಪ್ರಯಾಣ, ಆಹಾರ, ವೈದ್ಯಕೀಯ ಸಲಹೆ, ಪರೀಕ್ಷೆಗಳು, ಸ್ಕ್ಯಾನ್ಗಳು, ಔಷಧಿಗಳು ಹಾಗೂ ಅಗತ್ಯವಿರುವ ಯಾವುದೇ ಶಸ್ತ್ರಚಿಕಿತ್ಸೆಗಳು ಸೇರಿದಂತೆ ಎಲ್ಲಾ ವೆಚ್ಚಗಳನ್ನು ಶ್ರೀಮತಿ ಬಸವರಾಜೇಶ್ವರಿ ಅವರ ಮೊಮ್ಮಕ್ಕಳು ಪೂರ್ಣವಾಗಿ ಭರಿಸುತ್ತಿದ್ದಾರೆ.

* ಧನಿ ಶ್ರೀ ಮಹೇಂದ್ರ ರಾಜ ಜಹಗೀರ್ದಾರ್
* ಶ್ರೀ. ಪ್ರಭುರಾಜ ಜಹಗೀರ್ದಾರ್, ಸ್ಥಾಪಕರು – ಪ್ಯೂಪಿಲ್ ಟ್ರೀ ಶಾಲೆ,ಬಳ್ಳಾರಿ
* ಡಾ. ಮೇಧಿನಿ ಅಲ್ಲುಂ, ಃಒಅ ಆಸ್ಪತ್ರೆ, ಬಳ್ಳಾರಿ
* ಡಾ. ಭಾರತ್ ವಿ.ಜೆ., ಃಒಅ ಆಸ್ಪತ್ರೆ, ಬಳ್ಳಾರಿ

ಸಾಮಾಜಿಕ ಕಲ್ಯಾಣಕ್ಕೆ ತಮ್ಮ ಬದ್ಧತೆಯ ಭಾಗವಾಗಿ, ಗೆಜ್ಜಲಗಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಇಂತಹ ಸಮಗ್ರ ಆರೋಗ್ಯ ಶಿಬಿರಗಳನ್ನು ಮುಂದಿನ ದಿನಗಳಲ್ಲಿ ನಡೆಸುವ ಯೋಜನೆಯನ್ನು ಕುಟುಂಬವು ಪ್ರಕಟಿಸಿದ.

## ಲಿಂಗಸಗೂರು ರಜಿಯ ಮುಸ್ತಫ ಮದರಸಾ ಹೈಟೆಕ್ ಶೌಚಾಲಯಕ್ಕೆ ಭೂಮಿ ಪೂಜೆ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ನಗರದ ಲಿಂಗಸುಗೂರು ರಸ್ತೆಯಲ್ಲಿರುವ ರಜಿಯಾ ಮುಸ್ತಫಾ ಮದರಸಕ್ಕೆ ಇಂದು ಭೇಟಿ ನೀಡಿ, ಸಂಸದರ ಸ್ಥಳೀಯ ಪ್ರಾದೇಶಿಕ ಅಭಿವೃದ್ಧಿ ಅನುದಾನದಲ್ಲಿ (Mplads) 25 ಲಕ್ಷ ವೆಚ್ಚದಲ್ಲಿ ಹೈಟೆಕ್ ಶೌಚಾಲಯ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದೆ.**



ಈ ವೇಳೆಯಲ್ಲಿ ಸಚಿವರಾದ ಶ್ರೀ ಎನ್ ಎಸ್ ಬೋಸರಾಜು, ಶಾಸಕರಾದ ಶ್ರೀ ಹಂಪಯ್ಯ ಜಿ ನಾಯಕ, ಕಾಂಗ್ರೆಸ್ ಮುಖಂಡರಾದ ಶ್ರೀ ಮಹಮ್ಮದ್ ಶಾಲಾಂ, ಶ್ರೀ ಕೆ ಶಾಂತಪ್ಪ ಶ್ರೀ ರುದ್ರಪ್ಪ ಅಂಗಡಿ, ಶ್ರೀ ಜಿ ಶಿವಮೂರ್ತಿ, ಶ್ರೀ ರವಿ ಬೋಸರಾಜು ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು,ಕಾರ್ಯಕರ್ತರು

## ವಿಕಲಚೇತನರ ಗುರುತಿನ ಚೀಟಿಗಾಗಿ ಬಾಲಿಕಿಯ ನಾಲ್ಕು ವರ್ಷಗಳ ಓಡಾಟ

❏ ನೈಜ್ಯ ದೆಸೆ ನ್ಯೂಸ್

**ಸಿರವಾರ: ತಾಲೂಕಿನ ಬಾಗಲವಾಡ ಗ್ರಾಮದ ರಂಜನ್ ಬೀ ತಂದೆ ರಹಿಮಾನ್ ಸಾಬ್ ಶ್ರಾವಣ–ವಾಕ್ ದೋಷ ಹೊಂದಿರುವ ವಿಕಲಚೇತನೆ ಬಾಲಕಿಯಾಗಿದ್ದು. ಇವರ UDID(ವಿಕಲಚೇತನರ ವಿಶೇಷ ಗುರುತಿನ ಚೀಟಿ) ಸಿಗದೇ 2020ರಿಂದ ಇಲ್ಲಿಯವರೆಗೆ ಸುಮಾರು 20?30 ಬಾರಿ RIMS ಆಸ್ಪತ್ರೆಗೆ ಓಡಾಡಿದರೂ ಕೂಡಾ ಕೆಲಸ ಪೂರ್ಣವಾಗಿಲ್ಲ. ಜಿಲ್ಲಾ ಆಡಳಿತ ಹಾಗೂ ಆರೋಗ್ಯ ಇಲಾಖೆಯ ಗಂಭೀರ ಗಮನ ಸೆಳೆಯುವಂತಹ ವಿಷಯ.**

ರಂಜನ್ ಬೀ ಕುಟುಂಬದ ಮನಕಲಕುವ ಹಾದಿ ಈ ಹುಡುಗಿಗೆ ಗಆಖಆ ಅಗತ್ಯವಾದ ಕಾರಣ, ತಂದೆ–ತಾಯಿ ನಾಲ್ಕೂ ವರ್ಷಗಳಿಂದ ನಿರಾಶೆಯಿಂದಲೂ, ತಾಳ್ಮೆಯಿಂದಲೂ ದಾಖಲಾತಿ ಕೆಲಸಕ್ಕಾಗಿ ಖಋಒಖ ಆಸ್ಪತ್ರೆ ಹಾಗೂ ಸಂಬಂಧಿತ ವಿಭಾಗಗಳ ಬಾಗಿಲು ತಟ್ಟುತ್ತಿದ್ದಾರೆ. ಆದರೆ ಪ್ರತಿಬಾರಿ "ಮುಂದಿನ ತಿಂಗಳು ಬನ್ನಿ", "ಮೂರನೇ ತಾರೀಖು ಬನ್ನಿ" ಎಂಬ ಉತ್ತರವೇ ಸಿಗುತ್ತಿದೆ. ವೈದ್ಯರ ಮಾತು ಕುಟುಂಬದ ನೋವಿಗೆ ಕಾರಣ



ಪೋಷಕರು ಹೇಳುವುದೇನಂದರೆ: "ಡಾಕ್ಟರ್‌ಗಳಿಗೆ Report ಕೊಡಬೇಕಂದ್ರೆ 'ಹುಡುಗಿ ನಿದ್ದೆ ಮಾಡಬೇಕು' ಅಂತ ಹೇಳ್ತಾರೆ. ಸ್ವಲ್ಪ ಅವಳಿಗೆ ತೊಂದರೆ ಆದ್ರು ಕೂಡಾ 'ಇವತ್ತು ಆಗಲ್ಲ, ಮುಂದಿನ ತಿಂಗಳು 3ರಕ್ಕೆ ಬನ್ನಿ' ಅಂತ ಮುಂದೂಡ್ತಾರೆ. ಅವರು ಹೇಳಿದ ದಿನಕ್ಕೆ ಹೋದ್ರು ಮತ್ತೆ ಮತ್ತೊಂದು ಕಾರಣ ಹೇಳ್ತಾರೆ. ಹೀಗೆ ನಾಲ್ಕು ವರ್ಷಗಳಿನಿಂದ ಕೇವಲ ದಿನಾಂಕ ಬದಲಾವಣೆ, ತಳ್ಳಾಟ, ಲೋಪ ಆದರೆ ಕೆಲಸ ಇನ್ನೂ ಆಗಿಲ್ಲ. ಜಿಲ್ಲಾಡಳಿತಕ್ಕೆ ಮನವಿ ವಿಕಲಚೇತನರ ಕುಟುಂಬಗಳಿಗೆ UDID ಮಹತ್ವದ ದಾಖಲೆ. ಪಿಂಚಣಿ, ವೈದ್ಯಕೀಯ ನೆರವು, ಸರ್ಕಾರಿ ಕಲ್ಯಾಣ ಯೋಜನೆಗಳು ಎಲ್ಲಕ್ಕೂ ಇದು ಮೂಲ. ಇಂತಹ ಮಕ್ಕಳನ್ನು ತಿಂಗಳತನಕ, ವರ್ಷಗಳತನಕ ಓಡಾಡಿಸುವುದು ಮಾನವೀಯವಾಗಿಯೂ ಸರಿ ಅಲ್ಲ. ಈ ವಿಷಯವನ್ನು ಜಿಲ್ಲಾಡಳಿತ, ಆರೋಗ್ಯ ಇಲಾಖೆ ಹಾಗೂ ಖಋಒಖ ಮೇಲ್ದರ್ಜೆ ಅಧಿಕಾರಿಗಳು ತುರ್ತಾಗಿ ಪರಿಶೀಲಿಸಿ, ಈ ವಿಕಲಚೇತನೆ ಹುಡುಗಿಗೆ UDID ಮಂಜೂರು ಮಾಡುವ ಕ್ರಮ ಕೈಗೊಳ್ಳಲು ವಿನಂತಿ.

## ಯರಗೇರಾ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ ಸಾಧನೆ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ನವೆಂಬರ್ 24 (ಕರ್ನಾಟಕ ವಾರ್ತೆ): ಇಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನಡೆದ 17 ವರ್ಷದೊಳಗಿನ ಬಾಲಕೀಯರ ಜಿಲ್ಲಾ ಮಟ್ಟದ ಹ್ಯಾಮರ್ ಥ್ರೋನಲ್ಲಿ ನಗರದ ಯರಗೇರಾ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ ಕುಮಾರಿ ಕವಿತಾ ತಂದೆ ತಾಯಪ್ಪ ಅವರು ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.**



ಈ ವಿದ್ಯಾರ್ಥಿನಿಯ ಸಾಧನೆಗೆ ಶಾಲೆಯ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗದವರು ಮೆಚ್ಚುಗೆ ವ್ಯಕ್ತಪಡಿಸಿ ಶುಭ ಕೋರಿದ್ದಾರೆ ಎಂದು ಪ್ರಾಂಶುಪಾಲರಾದ ಕೊಟ್ರೇಶ್.ಜೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## BCT LBK ಪಿಯು ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಸಾಂಸ್ಕೃತಿಕ ವಿಭಾಗ ಮಟ್ಟಕ್ಕೆ ಆಯ್ಕೆ




❏ ನೈಜ್ಯ ದೆಸೆ ನ್ಯೂಸ್

ರಾಯಚೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿದ BCT **LBK ಪಿಯು ವಿದ್ಯಾರ್ಥಿಗಳು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿ ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ರಸಪ್ರಶ್ನೆ ವಿಭಾಗದಲ್ಲಿ ಸಾಗರ್ ಮತ್ತು ಮಾನಸ ಪ್ರಥಮ ಪಿಯುಸಿ ವಿದ್ಯಾರ್ಥಿಗಳು ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ.**

ಚರ್ಚಾ ಸ್ಪರ್ಧೆಯಲ್ಲಿ ವೀಣಾ ತಂದೆ ಬಸವರಾಜ್ ಪ್ರಥಮ ಪಿಯುಸಿಯ ವಿದ್ಯಾರ್ಥಿನಿಯು ದ್ವಿತೀಯ ಸ್ಥಾನವನ್ನು ಸಾಧಿಸಿದ್ದಾರೆ ಮತ್ತು ಅದೇ ರೀತಿಯಾಗಿ ಪ್ರಬಂಧ ಸ್ಪರ್ಧೆಯಲ್ಲಿ ಅರ್ಪಿತ ಎನ್ನುವ ದ್ವಿತೀಯ ಪಿಯುಸಿಯ ವಿದ್ಯಾರ್ಥಿನಿಯು ತೃತೀಯ ಸ್ಥಾನವನ್ನು ಪಡೆಯುವುದರ ಮೂಲಕ ಕಾಲೇಜಿನ ಘನತೆಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದ್ದಾರೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ಎಲ್ಲಾ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಪರಶುರಾಮ ಮಲ್ಲಾಪುರ್ ಉಪಾಧ್ಯಕ್ಷರಾದ ಶಂಕರ್ ಪತ್ತಾರ್ ಕಾರ್ಯದರ್ಶಿಯಾದ ಡಾ. ಅರುಣ್ ಕುಮಾರ್ ಬೇರಗಿ ಖಜಾಂಚಿಗಳಾದ ಜಯಪ್ಪ ಗೊರೆಬಾಳ್ ಪ್ರಾಚಾರ್ಯರಾದ ಶಿವಕುಮಾರ್ ಬಂಗಿ ಹಾಗೂ ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ವಸಂತ್ ಕುಮಾರ್ ಬಂಗಿ ಮತ್ತು ಎಲ್ಲಾ ಉಪನ್ಯಾಸಕ ವರ್ಗ ಮತ್ತು ಬೋಧಕೇತರ ವರ್ಗ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

## ಅತಿಥಿ ಉಪನ್ಯಾಸಕರಿಗೆ ಉದ್ಯೋಗ ಭದ್ರತೆ ನೀಡಿ ಇಲ್ಲವೆ ದಯಾಮರಣಕ್ಕೆ ಅವಕಾಶ ಕೊಡಿ :ಡಾ. ಹೆಚ್ ಆರ್ ಕಲ್ಮನಿ

❏ ನೈಜ್ಯ ದೆಸೆ ನ್ಯೂಸ್

**ಗದಗ: ನ,24:– ಸಂಘದ ರಾಜ್ಯಾಧ್ಯಕ್ಷರಾದ ಡಾಕ್ಟರ್. ಹನುಮಂತ ಗೌಡ ಕಲ್ಮನಿಯವರು ಇಂದು ಬೆಳಿಗ್ಗೆ ಗದಗಿನ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಕಳೆದ ಮೂರೂ ದಶಕಗಳಿಂದ ಅತಿಥಿ ಉಪನ್ಯಾಸಕರು ಶಿಕ್ಷಣ ವಲಯದಲ್ಲಿ ಮಹತ್ವದ ಸೇವೆ ಸಲ್ಲಿಸುತ್ತಿದ್ದರೂ,ಅವರ ಸೇವೆಗೆ ಶಾಶ್ವತ ಪರಿಹಾರ ಕೊಡಲು ಯಾವುದೇ ಸರ್ಕಾರ ಗಂಭೀರ ಮನಸ್ಸು ತೋರಿಸಿಲ್ಲ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.**

ರಾಜ್ಯದ ಫಸ್ಟ್ ಗ್ರೇಡ್ ಕಾಲೇಜುಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಅತಿಥಿ ಉಪನ್ಯಾಸಕರ ನಿಸ್ವಾರ್ಥ ಸೇವೆಯಿಂದಲೇ ಸಾಗುತ್ತಿವೆ. ಆದರೂ ಕೂಡ ಸ್ಥಿರೀಕರಣ, ವೇತನ ಸಮಾನತೆ, ವಾರ್ಷಿಕ ಭದ್ರತೆ,ಹಾಗೂ ಹಕ್ಕಿನ ಗುರುತಿನ ವಿಷಯದಲ್ಲಿ ಸರ್ಕಾರ ಇನ್ನೂ ಸ್ಪಷ್ಟ




ನಿಲುವು ತೆಗೆದುಕೊಂಡಿಲ್ಲ ಎಂಬುದು ಅತಿಥಿ ಉಪನ್ಯಾಸಕರ ಆಕ್ರೋಶಕ್ಕೆ ಕಾರಣವಾಗಿದೆ. ಈಗ ನ್ಯಾಯಾಲಯದ ಆದೇಶದ ನೆಪವೊಡ್ಡಿ ಗಉಅ ನಿಯಮಗಳ ಪ್ರಕಾರ N,E,T, k,S,E,T,PH,D, ಪಡೆದ ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನ ನಡೆಸಲು ಜೇಷ್ಠತಾ ಪಟ್ಟಿ ಬಿಟ್ಟು 5,600. ಜನ ಯು,ಜಿ,ಸಿ ನಿಯಮಗಳ ಪ್ರಕಾರ ಅರ್ಹತೆ ಪಡೆಯದೆ ಸುಮಾರು ಇಪ್ಪತ್ತು ವರ್ಷಗಳಿಂದ ಸೇವೆ ಮಾಡಿದ ಅನುಭವಿ ಹಿರಿಯ ಉಪನ್ಯಾಸಕರನ್ನು ಶಕ್ತಿ ಇರುವ ತನಕ ದುಡಿಸಿಕೊಂಡು ಈಗ ಬೀದಿಗೆ ಬಿಡುತ್ತಿರುವುದು ನ್ಯಾಯವೇ? ನ್ಯಾಯ ನೀಡದಿದ್ದರೆ ಚಳಿಗಾಲದ ಅಧಿವೇಷನಕ್ಕೆ ಮುತ್ತಿಗೆ ಹಾಕಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ, ಸಂಘವು 25 ನವೆಂಬರ್ 2025ರಂದು ಗದಗ ನಗರದಲ್ಲಿ ಬೃಹತ್ ಪ್ರತಿಭಟನೆ,ಮತ್ತು ಧರಣಿ ನಡೆಸುವುದಾಗಿ ಘೋಷಿಸಿದೆ. ರಾಜ್ಯದ ಎಲ್ಲಾ ಜಿಲ್ಲೆಗಳ ಅತಿಥಿ ಉಪನ್ಯಾಸಕರು ದೊಡ್ಡ ಪ್ರಮಾಣದಲ್ಲಿ ಈ ಹೋರಾಟದಲ್ಲಿ ಭಾಗಿಯಾಗುವಂತೆ ಡಾಕ್ಟರ್, ಕಲ್ಮನಿಯವರು ಮನವಿ ಮಾಡಿದ್ದಾರೆ. ಸರ್ಕಾರ ತ್ವರಿತವಾಗಿ ಶಾಶ್ವತ ನೀತಿ ಪ್ರಕಟಿಸಿ ಅತಿಥಿ ಉಪನ್ಯಾಸಕರಿಗೆ ಉದ್ಯೋಗ ಭದ್ರತೆ ಮತ್ತು ಮಾನವೀಯ ವೇತನ ನೀಡಬೇಕೆಂದು ಅವರು ಆಗ್ರಹಿಸಿದ್ದಾರೆ. ಶಿಕ್ಷಕರ ಸಂಕಷ್ಟವನ್ನು ನಿರ್ಲಕ್ಷಿಸುವ ಯಾವುದೇ ಆಡಳಿತವು ಶಿಕ್ಷಣ ಕ್ಷೇತ್ರಕ್ಕೆ ಅನ್ಯಾಯ ಮಾಡುತ್ತಿರುವಂತೆಯೇ ಆಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MS Obstetrics and Gynaecology

ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರದಲ್ಲಿ ಎಂಎಸ್ (OBGY) ಸ್ನಾತಕೋತ್ತರ ಕೋರ್ಸ್ ಆಗಿದೆ. ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರದಲ್ಲಿ ಎಂಎಸ್ ಮೂರು ವರ್ಷಗಳ ಸ್ನಾತಕೋತ್ತರ ಕೋರ್ಸ್ ಆಗಿದೆ. ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ (ಅಥವಾ ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ; ಸಾಮಾನ್ಯವಾಗಿ OB/GYN, OBG, O&G ಎಂದು ಸಂಕ್ಷಿಪ್ತಗೊಳಿಸಲಾಗುತ್ತದೆ; ಕೇವಲ ಒಂದು ಸ್ನಾತಕೋತ್ತರ ತರಬೇತಿ ಕಾರ್ಯಕ್ರಮದ ಮೂಲಕ ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರದ ಕ್ಷೇತ್ರಗಳನ್ನು ನಿರ್ವಹಿಸುವ ವೈದ್ಯಕೀಯ ವಿಶೇಷತೆಯಾಗಿದೆ. ಈ ಸಂಯೋಜಿತ ತರಬೇತಿಯು OB/GYN ಅನ್ನು ಶಸ್ತ್ರಚಿಕಿತ್ಸೆಯ ಮೂಲಕವೂ ಸ್ತ್ರೀ ಸಂತಾನೋತ್ಪತ್ತಿ ಅಂಗಗಳ ಆರೋಗ್ಯ ಮತ್ತು ಪ್ರಸೂತಿ ತೊಡಕುಗಳ ನಿರ್ವಹಣೆಯಲ್ಲಿ ಪ್ರವೀಣರಾಗಲು ಸಿದ್ಧಪಡಿಸುತ್ತದೆ. ಈ ಕಾರ್ಯಕ್ರಮವು ಕ್ಲಿನಿಕಲ್ ಕುಶಾಗ್ರಮತಿ, ಕಾರ್ಯವಿಧಾನದ ಕೌಶಲ್ಯಗಳು ಮತ್ತು ವರ್ತನೆಗಳಲ್ಲಿ ಸಾಕಷ್ಟು ಜ್ಞಾನವನ್ನು ಒದಗಿಸುತ್ತದೆ, ಇದು ಗರ್ಭಧಾರಣೆ ಮತ್ತು ಅದರ ತೊಡಕುಗಳನ್ನು ನಿರ್ವಹಿಸಲು, ಸ್ತ್ರೀ ಜನನಾಂಗದ ಪ್ರದೇಶದ ಮೇಲೆ ಪರಿಣಾಮ ಬೀರುವ ಅಸ್ವಸ್ಥತೆಗಳು ಮತ್ತು ಮಾನವ ಸಂತಾನೋತ್ಪತ್ತಿಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿರ್ವಹಿಸಲು ಅವನಿಗೆ/ಅವಳಿಗೆ ಅನುವು ಮಾಡಿಕೊಡುತ್ತದೆ. ಮಾನ್ಯತೆ ಪಡೆದ ಸಂಸ್ಥೆಯಿಂದ MBBS ಪದವಿ ಹೊಂದಿರುವ, ಭಾರತೀಯ ವೈದ್ಯಕೀಯ ಮಂಡಳಿ ಅಥವಾ ಯಾವುದೇ ಇತರ ರಾಜ್ಯ ವೈದ್ಯಕೀಯ ಮಂಡಳಿಗಳಲ್ಲಿ ಶಾಶ್ವತವಾಗಿ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳು ಈ ಕೋರ್ಸ್ಗೆ ಅರ್ಹರಾಗಿರುತ್ತಾರೆ. ಪಠ್ಯಕ್ರಮವು ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರದಲ್ಲಿ ಭವಿಷ್ಯದ ನಾಯಕರಿಗೆ ವೈಜ್ಞಾನಿಕ ತನಿಖೆ ಮತ್ತು ರೋಗಿಗಳ ಆರೈಕೆ ಎರಡರಲ್ಲೂ ತರಬೇತಿ ನೀಡುತ್ತದೆ. ಪಠ್ಯಕ್ರಮ: ಭಾರತೀಯ ವೈದ್ಯಕೀಯ ಮಂಡಳಿ (MCI) ಮತ್ತು ಅಮೃತ ವಿಶ್ವ ವಿದ್ಯಾಪೀಠದ ಪ್ರಕಾರ ಕರ್ನಾಟಕದಲ್ಲಿ ಪ್ರವೇಶ NEET-PG: NEET-PG ಪರೀಕ್ಷೆಯಲ್ಲಿನ ಸಾಧನೆಯ ಆಧಾರದ ಮೇಲೆ ಪ್ರವೇಶ ಸಮಾಲೋಚನೆ: ಸಾಮಾನ್ಯ ವರ್ಗದ ಸೀಟುಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA) ಕೇಂದ್ರೀಕೃತ ಕೌನ್ಸಲಿಂಗ್ ಅನ್ನು ನಡೆಸುತ್ತದೆ. ವೃತ್ತಿ ನಿರೀಕ್ಷೆಗಳು ಉದ್ಯೋಗದ ಪಾತ್ರಗಳು: ಸ್ತ್ರೀರೋಗತಜ್ಞ, ಸಾಮಾನ್ಯ ವೈದ್ಯ, ಶಸ್ತ್ರಚಿಕಿತ್ಸಕ ಸಂಭಾವ್ಯ ಉದ್ಯೋಗದಾತರು: ಫೋರ್ಟಿಸ್, ಅಪೊಲೊ ಮತ್ತು ಮ್ಯಾಕ್ಸ್ ಹೆಲ್ತ್‌ಕೇರ್‌ನಂತಹ ಆಸ್ಪತ್ರೆಗಳು, ಹಾಗೆಯೇ ಸಂಶೋಧನಾ ಸಂಸ್ಥೆಗಳು

## ತಾತ್ಕಾಲಿಕ ಗರ್ಭನಿರೋಧಕ ವಿಧಾನ 'ಅಂತರ' ಚುಚ್ಚುಮದ್ದು ಉಪಯುಕ್ತ: ವೈದ್ಯರ ಸಲಹೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ನವೆಂಬರ್ 24 (ಕರ್ನಾಟಕ ವಾರ್ತೆ): 'ಅಂತರ' ಎಂಬ ಹೆಸರಿನಿಂದ ಕರೆಯಲ್ಪಡುವ ತಾತ್ಕಾಲಿಕ ಗರ್ಭನಿರೋಧಕ ವಿಧಾನವಾದ ಅಂತರ ಚುಚ್ಚುಮದ್ದು ಅತ್ಯಂತ ಸರಳವಾಗಿದೆ.**

ಯಾವುದೇ ಅನಾನೂಕೂಲತೆಯಾಗದಂತೆ ದಂಪತಿಯ ನಿರ್ಧಾರದ ಮೇರೆಗೆ ಮೊದಲ ಹೆ-ರಿಗೆ ನಂತರ ಮಗುವಿನ ತಾಯಿಯು ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಪಡೆಯಬಹುದಾದ ಚುಚ್ಚುಮದ್ದನ್ನು ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅಧಿಕಾರಿಗಳು ತಿಳಿಸಿದ್ದಾರೆ.

ಅಂತರ ಗರ್ಭನಿರೋಧಕ ಚುಚ್ಚುಮದ್ದನ್ನು ರಾಯಚೂರು ಜಿಲ್ಲೆಯ ಎಲ್ಲ ತಾಲೂಕಿನ ತಾಲೂಕು ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥ-ಮಿಕ ಆರೋಗ್ಯ ಕೇಂದ್ರಗಳು, ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ ವಿವಿಧ ಸರ್ಕಾರಿ ಆರೋಗ್ಯ ಕೇಂದ್ರಗಳು ಹಾಗೂ ರಿಮ್ಸ್ನಲ್ಲಿ ಅಂತರ ಚುಚ್ಚುಮದ್ದನ್ನು ಉಚಿತವಾಗಿ ಒದಗಿಸಲಾಗುತ್ತದೆ. ಒಂದು ಡೋಸ್ ಮೂಲಕ ಮೂರು ತಿಂಗಳವರೆಗೆ ಗರ್ಭಧಾರಣೆ ತಡೆಯಬಹುದಾಗಿದೆ. ಇದು ಭಾರತ ಸರ್ಕಾರದ ಕುಟುಂಬ ಯೋಜನಾ ಕಾರ್ಯಕ್ರಮದ




ಭಾಗವಾಗಿ ರಾಜ್ಯ ಸರಕಾರದ ಮಾರ್ಗದರ್ಶನದಲ್ಲಿ ರಾಯಚೂರು ಜಿಲ್ಲೆಯ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಸಾರ್ವಜನಿಕರಿಗೆ ಲಭ್ಯವಿದೆ. ಅಂತರ ಎಂಬುದು ಸರಕಾರ ಸೂಚಿತ ಅಧಿಕೃತ ಹೆಸರಾಗಿದೆ.

ಇದು ಹೆಚ್ಚು ಪರಿಣಾಮಕಾರಿ, ದೀರ್ಘಕಾಲ ಕಾರ್ಯನಿರ್ವಹಿಸುವ ರಿವರ್ಸಿಬಲ್ ಗರ್ಭನಿರೋಧಕ ವಿಧಾನವಾಗಿದ್ದು, ಅಂತರ ಇಂಜೆಕ್ಷನ್‌ನನ್ನು ಪ್ರತಿ ಮೂರು ತಿಂಗಳುಗಳಿಗೊಮ್ಮೆ ವರ್ಷದಲ್ಲಿ 4 ಸಾರಿ ಪಡೆದಲ್ಲಿ ಕನಿಷ್ಟ ಒಂದು ವರ್ಷ ಗರ್ಭಧಾರಣೆ ಮುಂದೂಡಲು ಸಹಾಯಕವಾಗುವುದು. ಪ್ರಸ್ತುತ ಏಪ್ರಿಲ್‌ನಿಂದ ಇಲ್ಲಿವರೆಗೆ 1037 ಮಹಿಳೆಯರು ಫಲಾನುಭವಿಗಳಾಗಿ ಚುಚ್ಚುಮದ್ದು ಪಡೆಯುತ್ತಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರ ಬಾಬು ತಿಳಿಸಿದ್ದಾರೆ. ತಪಾಸಣೆಯ ನಂತರ ಇಂಜೆಕ್ಷನ್: ಇದು ಮಾಂಸಖಂಡದ ಒಳಗೆ ನೀಡುವ ಇಂಜೆಕ್ಷನ್





ಆಗಿದ್ದು, ಸಾಮಾನ್ಯವಾಗಿ ಮಹಿಳೆಯ ಆರೋಗ್ಯ ತಪಾಸಣೆಯ ನಂತರ ತರಬೇತಿ ಪಡೆದ ಆರೋಗ್ಯ ಸಿಬ್ಬಂದಿಯವರು ವೈದ್ಯರ ನೇತೃತ್ವದಲ್ಲಿ ತೋಳು ಅಥವಾ ತೊಡೆಯಲ್ಲಿ ಈ ಇಂಜೆಕ್ಷನ್ ನೀಡುತ್ತಾರೆ.

ಗರ್ಭಧಾರಣೆಯ ಅಂತರವನ್ನು ಕಾಯ್ದುಕೊಳ್ಳಲು ಅಥವಾ ಹೆರಿಗೆಯನ್ನು ವಿಳಂಬಗೊಳಿಸಲು ಬಯಸುವ ಮಹಿಳೆಯರಿಗೆ ಇದು ಸೂಕ್ತವಾದ ಆಯ್ಕೆಯಾಗಿದೆ. ಸಾಮಾನ್ಯವಾಗಿ 6 ವಾರಗಳ ಪ್ರಸವಾನಂತರದಿಂದ ಪ್ರಾರಂಭವಾಗುವ ಹಾಲುಣಿಸುವ ತಾಯಂದಿರಿಗೂ ಇದು ಸೂಕ್ತವಾಗಿದೆ ಎಂದು ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅಧಿಕಾರಿ ಡಾ ಶಿವಕುಮಾರ ಅವರು ತಿಳಿಸಿದ್ದಾರೆ. ಪ್ರಯೋಜನಗಳು: ಗರ್ಭಧಾರಣೆಯನ್ನು ತಡೆಗಟ್ಟುವುದರ ಜೊತೆಗೆ, ಇದು ಗರ್ಭನಿರೋಧಕವಲ್ಲದ ಪ್ರಯೋಜನಗಳನ್ನು ನೀಡುತ್ತದೆ.

ಸ್ತನ ಕ್ಯಾನ್ಸ್ರ ನಿಯಂತ್ರಣ, ಗರ್ಭಕೋಶ ಸಮಸ್ಯೆಗಳ ಕಡಿಮೆ ಮಾಡುವಿಕೆ, ರಕ್ತಹೀನತೆ ಅಪಾಯ ಕಡಿಮೆ ಮಾಡುವುದು, ವಿಶೇಷವಾಗಿ ಮಹಿಳೆಯರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಾಗ ಉಂಟಾಗುವ ಮುಜುಗರದಿಂದ ದೂರವಾಗಲು ಇದು ಸಹಕಾರಿ ಎಂದು ತಿಳಿಸಿದರು. ಪುನಃ ಗರ್ಭ ಧರಿಸುವಿಕೆಗೆ ಮರಳುವಿಕೆ: ಇಂಜೆಕ್ಷನ್‌ನ್ನು ನಿಲ್ಲಿಸಿದ ನಂತರ, ಪುನಃ ಗರ್ಭಧಾರಣೆಗೆ ಮರಳುವ ಸರಾಸರಿ ಸಮಯ ಸುಮಾರು 7 ರಿಂದ 10 ತಿಂಗಳುಗಳು ಇರುತ್ತದೆ.

ಆದರೆ, ಇದು ಪ್ರತಿಯೊಬ್ಬ ವ್ಯಕ್ತಿಗೆ ಬದಲಾಗಬಹುದಾಗಿದೆ. ಪುನರಾವರ್ತಿತ ಡೋಸ್‌ಗಳು: ಪರಿಣಾಮಕಾ-ರಿತ್ವವನ್ನು ಕಾಪಾಡಿಕೊಳ್ಳಲು, ಮುಂದಿನ ಡೋಸ್‌ನ್ನು ಪ್ರತಿ ಮೂರು ತಿಂಗಳಿಗೊಮ್ಮೆ, ಹೊಂದಿಕೊಳ್ಳುವ ಅವಧಿಯಲ್ಲಿ (ಕೊನೆಯ ಇಂಜೆಕ್ಷನ್ ನಿಂದ 75 ರಿಂದ 120 ದಿನಗಳು) ತೆಗೆದುಕೊಳ್ಳಬೇಕು. ಇಂಜೆಕ್ಷನ್ ಸೈಟ್ ನಿರ್ವಹಣೆಯ ನಂತರ ಮಸಾಜ್ ಮಾಡಬಾರದು ಅಥವಾ ಉಜ್ಜಬಾರದು. ವೈಯಕ್ತಿಕ ಆರೋಗ್ಯ ಪರಿಸ್ಥಿತಿಗಳ ಆಧಾರದ ಮೇಲೆ ಅಂತರ ಸರಿಯಾದ ಗರ್ಭನಿರೋಧಕ ಆಯ್ಕೆಯಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಅಂತರ ಚುಚ್ಚುಮದ್ದು ಪ್ರಾರಂಭಿಸುವ ಮೊದಲು ಸ್ತ್ರೀರೋಗತಜ್ಞರು ಅಥವಾ ಆರೋಗ್ಯ ವೃತ್ತಿಪರರೊಂದಿಗೆ ಸಮಾಲೋಚಿಸಬೇಕು. ಸಾಮಾನ್ಯ ಅಡ್ಡಪರಿಣಾಮಗಳು ಮುಟ್ಟಿನ ಚಕ್ರದಲ್ಲಿನ ಬದಲಾವಣೆಗಳನ್ನು ಒಳಗೊಂಡಿರಬಹುದಾಗಿದೆ. ಉದಾಹರಣೆಗೆ ಅನಿಯಮಿತ ಮುಟ್ಟುಗಳು, ಅಮೆನೋರಿಯಾ (ಋತುಚಕ್ರದ ಅನುಪಸ್ಥಿತಿ) ಈ ಬದಲಾವಣೆಗಳು ಸಾಮಾನ್ಯ ಮತ್ತು ಕಾಲಾನಂತರದಲ್ಲಿ ಕಡಿಮೆಯಾಗುತ್ತವೆ ಎಂದು ಡಾ ಶಿವಕುಮಾರ ಅವರು ತಿಳಿಸಿದ್ದಾರೆ.

## ಭತ್ತ, ಜೋಳ, ತೊಗರಿ, ಹತ್ತಿ, ಸಮಗ್ರ ನೀರಾವರಿ ರೈತರ ಸಂಘಟನೆಯಿಂದ ನ.26 ರಂದು ಅನಿರ್ಧಿಷ್ಟ ಧರಣಿ




❑ ನೈಜ್ಯ ದೆಸೆ ನ್ಯೂಸ್

**ಕರ್ನಾಟಕ ರಾಜ್ಯ ಭತ್ತ, ಜೋಳ, ಹತ್ತಿ, ತೊಗರಿ, ಮತ್ತು ಸಮಗ್ರ ನೀರಾವರಿ ರೈತರ ಸಂಘಟನೆಯಿಂದ ನ.26 ರಂದು ರೈತರ ವಿವಿಧ ಬೇಡಿಕೆಗಳ ಈಡೇರಿಕೆಗಳಿಗಾಗಿ ತಹಶೀಲ್ದಾರ್ ಕಚೇರಿ ಮುಂದೆಯೇ ಅನಿರ್ಧಿಷ್ಟ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗುವುದು ಎಂದು ಸಂಸ್ಥಾಪಕರು ಹಾಗೂ ರಾಜ್ಯಾಧ್ಯಕ್ಷರಾದ ಮೃತ್ಯುಂಜಯಸ್ವಾಮಿ ಹೇಳಿದರು.**

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನಾವು ನಡೆಸುವ ಧರಣಿ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು, ಹಾಗೂ ಜಿಲ್ಲಾಧಿಕಾರಗಳು ಧಾವಿಸಿ, ರೈತರ ಸಮಸ್ಯೆ ಆಲಿಸಿ ರೈತರ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಲೆಬೇಕು. ಜಿಲ್ಲಾಧಿಕಾ-ರಿಗಳು, ಜಿಲ್ಲಾ ಉಸ್ತುವಾರಿಗಳು ಪ್ರತಿಭಟನೆ ಸ್ಥಳಕ್ಕೆ ಬರುವವರಿಗೆ ನಮ್ಮ ಅನಿರ್ಧಿಷ್ಟ ಧರಣಿಯ ಹೋರಾಟವು ಮಾತ್ರ ನಿರಂತರವಾಗಿರುತ್ತದೆ. ಪ್ರತಿ ಹೋಬಳಿ ಮಟ್ಟದಲ್ಲಿ ಭತ್ತ ಖರೀದಿ ಕೇಂದ್ರ ಪ್ರಾರಂಭಕ್ಕೆ ಸರ್ಕಾರ ಮುಂದಾಗಬೇಕು.ಸರ್ಕಾರ ಪ್ರತಿಕ್ವಿಂಟಲ್ ಭತ್ತಕ್ಕೆ ಗ್ರೇಡ್ ಭತ್ತಕ್ಕೆ 2369 ರೂ.ಗ್ರೇಡ್ 2389 ರೂ.ನಿಗದಿಪಡಿಸಿದೆ. ಒಂದು ಚೀಲ ಗೊಬ್ಬರ 1700 ರೂ.ಇದೆ.

ಅದೇ ಭತ್ತವನ್ನು 1700 ರೂಗೆ ಖರೀದಿ ಮಾಡಿದರೆ, ರೈತರಿಗೆ ಏನು ಉಳಿಯುತ್ತದೆ ಎಲ್ಲಿಗೆ ಹೋಗಬೇಕು. ಕೊಪ್ಪಳ ಹಾಗೂ ರಾಯಚೂರು ಎರಡು ಜಿಲ್ಲೆಗಳ ರೈತರನ್ನು ಒಳಗೊಂಡು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜೊತೆಗೆ ಬೆಂಬಲಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಈ ವೇಳೆ: ಗೌರವಾಧ್ಯಕ್ಷರಾದ ಅಮರೇಶ ಸಾಹುಕಾರ್ ಚಿಕ್ಕದಿನ್ನಿ, ಉಪಾಧ್ಯಕ್ಷ ಶಿವಕುಮಾರ ಪಿ ವಟಗಲ್, ಕರಿಯಪ್ಪ ಪಾಟೀಲ್ ಡೊಣಮರಡಿ, ಅಮರೇಶ ಪಲ್ಲೇದ್ ಇದ್ದರು.

## ರೈತ ಸಂಘಟನೆ ವಿವಿಧ ಬೇಡಿಕೆಗಳಿಗೆ ತಹಶೀಲ್ದಾರ್ ಕಚೇರಿಗೆ ಮುತ್ತಿಗೆ

❑ ನೈಜ್ಯ ದೆಸೆ ನ್ಯೂಸ್

**ಎರಡನೇ ಬೆಳೆಗೆ ನೀರು ಬಿಡಬೇಕು ಎನ್ನುವ ಬೇಡಿಕೆ ಜೊತೆಗೆ ವಿವಿಧ ಹಕ್ಕೊತ್ತಾಯಗಳ ಈಡೇರಿಕೆಗಾಗಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಸಮಿತಿಯಿಂದ ತಹಶೀಲ್ ಕಚೇ-ರಿಗೆ ಮುತ್ತಿಗೆ ಹಮ್ಮಿಕೊಳ್ಳಲಾಗಿತ್ತು.**

ಈ ಪ್ರತಿಭಟನೆ ಪ್ರವಾಸಿಮಂದಿರದಿಂದ ತಹಶೀಲ್ದಾರ್ ಕಚೇರಿಯವರೆಗೆ ಪ್ರತಿಭಟನೆ ಮೆರವಣಿಗೆ ನಡೆಸಿ ತಹಶೀಲ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ಪ್ರತಿಭಟನಾ ನಿರತರನ್ನು ಬಂಧಿಸಿ ಗ್ರಾಮೀಣ ಠಾಣೆಗೆ ಕರೆದೊಯ್ದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಅಮೀನ್ ಪಾಷಾ ದಿದ್ದಿಗಿ ಮಾತನಾಡಿ, ತುಂಗಭದ್ರಾ ಡ್ಯಾಮ್



ನಿಂದ ಎಡದಂಡೆಯ ಮುಖ್ಯ ನಾಲೆಗೆ ನೀರು ಹರಿಸಬೇಕು. ಡಿ.1 ರಿಂದ ಜೋಳ ಖರೀದಿ ಕೇಂದ್ರಗಳಲ್ಲಿ ನೋಂದಣಿ ಮಾಡುವುದರ ಜೊತೆಗೆ ರೈತರು ಬೆಳೆದ ಎಲ್ಲಾ ಜೋಳವನ್ನು ಖರೀದಿ ಮಾಡಬೇಕು.

ರೈತರಿಗೆ ಸಾಲ ಮರುಪಾವತಿಸುವಂತೆ ಬ್ಯಾಂಕುಗಳು ನೀಡುವ ಕಿರುಕುಳ ತಪ್ಪಿಸಬೇಕು.



ಹೊಸದಾಗಿ ರೈತರು ಪಂಪಸೆಟ್ ಗಳಿಗೆ ಅರ್ಜಿ ಸಲ್ಲಿಸದ ಎಲ್ಲಾ ಸಾಮಗ್ರಿಗಳನ್ನು ಉಚಿತವಾಗಿ ಪೂರೈಸಬೇಕು ಎಂದು ಆಗ್ರಹಿಸಿದರು. ಈ ವೇಳೆ: ಜಿಲ್ಲಾಧ್ಯಕ್ಷರಾದ ಬಸವರಾಜ ಹಂಚಿನಾಳ, ತಾಲೂಕು ಅಧ್ಯಕ್ಷ ಶಿವನಗೌಡ ಗುಡುದೂರು, ಗೌರವಾಧ್ಯಕ್ಷ ಅಪ್ಪಣ್ಣ ಹುಡೇದ್, ನಾಗನಗೌಡ ಪೋತ್ನಾಳ, ವೀರೇಶ ಮಡಿವಾಳ, ಬಸವರಾಜ ಗೋಡಿಹಾಳ ಸೇರಿದಂತೆ ಅನೇಕ ರೈತರಿದ್ದರು.

## ಮಸ್ಕಿಯ VIP ಕಾಲೇಜಿನ ವಿದ್ಯಾರ್ಥಿ ಭಾರತೀಯ ಸೇನೆಗೆ ಕುಮಾರ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಮಸ್ಕಿ ಪಟ್ಟಣದ ವಿದ್ಯಾನಿಕೇತನ ಪದವಿ ಪೂರ್ವ ಕಾಲೇಜು ಮಸ್ಕಿಯ 2023–24 ನೆಯ ಸಾಲಿನ ವಿದ್ಯಾರ್ಥಿ ಕುಮಾರ ತಂದೆ ಚೋಳಪ್ಪ ಮಸ್ಕಿ ತಾಂಡಾ ಈ ವಿದ್ಯಾರ್ಥಿಯು ಇತ್ತೀಚಿಗೆ ಬೆಂಗಳೂರಿನಲ್ಲಿ ನಡೆದ ಭಾರತೀಯ ಸೇನಾ ಆಯ್ಕೆಯ ಸಿ ಇ ಟಿ ಪರೀಕ್ಷೆ ಹಾಗೂ ದೈಹಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.**



ಅತ್ಯಂತ ಸಣ್ಣ ವಯಸ್ಸಿನಲ್ಲಿ ಆರ್ಮಿಗೆ ಆಯ್ಕೆಯಾಗಿ ತಾಯಿ ಭಾರತ ಮಾತೆಯ ಸೇವೆಗೆ ಸಿದ್ಧರಾಗಿದ್ದಾರೆ. ವಿದ್ಯಾರ್ಥಿಯ ಸಾಧನೆಗೆ ಅವರ ತಂದೆ, ತಾಯಿ ಊರಿನ ಹಿರಿಯರು ಕುಮಾರ ವಿದ್ಯಾಭ್ಯಾಸ ಮಾಡಿದ ಕಾಲೇಜಿನ ಕಾರ್ಯದರ್ಶಿ ನಾಗರಾಜ್ ಶೆಟ್ಟಿ ಆಡಳಿತ ಮಂಡಳಿ ಹಾಗೂ ಪ್ರಾಚಾರ್ಯರು ವಿನಯ್ ಕುಮಾರ್ ಹಾಗೂ ಹಿರಿಯ ಉಪನ್ಯಾಸಕರು ಪಂಪಣ್ಣ ಸಜ್ಜನ್ ಹಾಗೂ ಉಪನ್ಯಾಸಕರು ಹಾಗೂ ಸಮಸ್ತ ವಿದ್ಯಾರ್ಥಿ ಬಳಗ ಅಭಿನಂದನೆಗಳನ್ನು ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ತಾಲೂಕು ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ರವಿಕುಮಾರ ಪಾಟೀಲ್ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತಾಲೂಕು ವಕೀಲರ ಸಂಘಕ್ಕೆ 2026–27 ನೇ ಸಾಲಿಗಾಗಿ ನಡೆದ ಚುನಾವಣೆಯಲ್ಲಿ ವಕೀಲರ ಸಂಘದ ಅಧ್ಯಕ್ಷರಾಗಿ ರವಿಕುಮಾರ ಪಾಟೀಲ್, ಉಪಾಧ್ಯಕ್ಷರಾಗಿ ಶಿವಪ್ಪ ಸುಂಕನೂರು,ವಿಶ್ವನಾಥ ರಾಯಪ್ಪ, ಪ್ರ.ಕಾರ್ಯದರ್ಶಿಯಾಗಿ ಯಲ್ಲಪ್ಪ ಬಾದರದಿನ್ನಿ, ಜಂಟಿ ಕಾರ್ಯದರ್ಶಿಯಾಗಿ ನಾಗರಾಜ ಗೂಗಲ್, ಮಹಿಳಾ ಮೀಸಲು ಸ್ಥಾನಗಳಾದ ಖಜಾಂಚಿ ಸ್ಥಾನಕ್ಕೆ ಸ್ಟೇಲಾ ಶಾರ್ಲಾಟ್ ಜಂಟಿ ಕಾರ್ಯದರ್ಶಿಯಾಗಿ ಚಂದ್ರಕಲಾ ಅವಿರೋಧ ಆಯ್ಕೆ ಯಾಗಿದ್ದಾರೆ.**



ಒಟ್ಟು 234 ಸದಸ್ಯರಲ್ಲಿ 221 ಸದಸ?ಯರು ತಮ್ಮ ಮತವನ್ನು ಚಾಲಾಯಿಸಿದ್ದು ವಿಶೇಷವಾಗಿತ್ತು . ಚುನಾವಣಾಧಿಕ-ರಿಗಳಾಗಿ ಹಿರಿಯ ನ್ಯಾಯಾವಾಧಿಗಳಾದ ಕೆ.ಶ್ರೀನಿವಾಸ ,ಸಹಾಯಕ ಚುನಾವಣಾಧಿಕಾರಿಗಳಾಗಿ ಅರವಿಂದ ದೇಸಾಯಿ, ಮತ್ತು ಎಂ.ಭರತ್ ಪಾಟೀಲ್ ಕಾರ್ಯನಿರ್ವಹಿಸಿದರು.

ನೂತನವಾಗಿ ವಕೀಲರ ಸಂಘಕ್ಕೆ ಆಯ್ಕೆಯಾದ ಎಲ್ಲಾ ಪದಾಧಿಕಾರಿಗಳನ್ನು ನ್ಯಾಯಾಲಯದ ಅವರಣದಲ್ಲಿ ವಕೀಲರು ಗೌರವಿಸಿ ಸಂಭ್ರಮಾಚರಣೆ ಮಾಡಿದರು.

## ಡಿ. 21 ರಂದು ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಅಂಗವಾಗಿ ತರಬೇತಿ ಕಾರ್ಯಕ್ರಮ: ಡಾ. ಸುರೇಂದ್ರ ಬಾಬು

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಶ್ವ ಆರೋಗ್ಯ ಸಂಸ್ಥೆ ಸಹಯೋಗದಲ್ಲಿ ನಡೆದ ಜಿಲ್ಲಾ ಮಟ್ಟದ ವೈದ್ಯಾಧಿಕಾರಿಗಳ ಹಾಗೂ ಸಿಬ್ಬಂದಿಯವರಿಗೆ ಪಲ್ಸ್ ಪೋಲಿಯೋ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಸುರೇಂದ್ರ ಬಾಬು ಮಾತನಾಡಿ 2011 ರ ಜ. 13 ರಂದು ಭಾರತದಲ್ಲಿ ಪೋಲಿಯೋ ಕೊನೆಯ ಪ್ರಕರಣ ವರದಿಯಾದ ನಂತರ ಇಲ್ಲಿಯವರೆಗೆ ನಿರಂತರ ನಿಗಾವಣೆಯೊಂದಿಗೆ ಮಕ್ಕಳಿಗೆ ವಯಸ್ಸಿಗನುಗುಣವಾಗಿ ಎರಡು ಹನಿ ಪೋಲಿಯೋ ಲಸಿಕೆ ಹಾಕುವ ಮೂಲಕ ಸತತ 14 ವರ್ಷಗಳಿಂದ ದೇಶದಲ್ಲಿ ಪೋಲೀಯೊ ಕಾಯಿಲೆ ಪ್ರಕರಣಗಳು ವರದಿಯಾಗಿರುವುದಿಲ್ಲ,.**

ಜಗತ್ತಿನಲ್ಲಿ ಇಂದು ಪೋಲಿಯೋ ರೋಗ ಸಂಪೂರ್ಣವಾಗಿ ನಿರ್ಮೂಲನೆಯ ಹಂತಕ್ಕೆ ತಲುಪಿದ್ದರು ಕೂಡ ದೇಶದಲ್ಲಿ ಪುನಃ ಪೋಲಿಯೋ ರೋಗ ಬರಬಾರದು



ಎನ್ನುವ ಉದ್ದೇಶದಿಂದ ಡಿ. 21 ರಂದು ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಜಿಲ್ಲೆಯಲ್ಲಿನ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ತಪ್ಪದೆ ಲಸಿಕೆ ಹಾಕಿಸಲು ಆರೋಗ್ಯ ಇಲಾಖೆಯ ಸಿಬ್ಬಂದಿಯವರು ಇಂದಿನಿಂದಲೇ ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ.ನಂದಿತಾ .ಎಂ.ಎನ್. ಮಾತನಾಡಿ ತಾಲೂಕಿನ ಎಲ್ಲಾ ವಸತಿ ಪ್ರದೇಶಗಳು, ವಲಸೆ ಪ್ರದೇಶಗಳು, ಕಟ್ಟಡ ನಿರ್ಮಾಣ ಪ್ರದೇಶಗಳು, ಇಟ್ಟಿಗೆ ಬಟ್ಟಿ, ಕುರಿಗಾಯಿಗಳು ತಂಗಿರುವ ಸ್ಥಳಗಳು, ಕೊಳಚೆ ಪ್ರದೇಶಗಳು ತೋಟದ ಮನೆ, ದೊಡ್ಡಿ, ಹಟ್ಟಿ, ಕ್ಯಾಂಪ್‌ಗಳು, ನಗರಗಳಲ್ಲಿಯ ಅಪಾರ್ಟ್ಮೆಂಟ್ ಗಳು ಸೇರಿದಂತೆ ಎಲ್ಲ ಸ್ಥಳಗಳಲ್ಲಿಯ ಮಕ್ಕಳ ಸಂಖ್ಯೆಯನ್ನು ಪಟ್ಟಿ ಮಾಡಿಟ್ಟುಕೊಂಡು ಈ ಹಿಂದೆ ಎಷ್ಟೆ ಬಾರಿ ಪೋಲಿಯೋ ಹನಿ ಹಾಕಿಸಿದ್ದರೂ ಸಹ ಪಾಲಕರು ತಮ್ಮ ಮಕ್ಕಳಿಗೆ ತಪ್ಪದೆ ಎರಡು ಹನಿ ಪೋಲಿಯೋ ದ್ರಾವಣ ಲಸಿಕೆಯನ್ನು ಹಾಕಿಸಲು ತಿಳಿಸಬೇಕು ಎಂದು ತಿಳಿಸಿದರು. ವಿಶ್ವ ಆರೋಗ್ಯ ಸಂಸ್ಥೆಯ ಕಲಬುರ್ಗಿ ವಲಯ ಸರ್ವೇಕ್ಷಣಾಧಿಕಾರಿ ಡಾ ಅನೀಲ್ ತಾಳಿಕೊಟಿಯವರು ಜಿಲ್ಲೆಯ ವಿವಿಧ ತಾಲೂಕುಗಳ ವೈದ್ಯಾಧಿಕಾರಿಗಳಿಗೆ ಹಾಗೂ ಆರೋಗ್ಯ ಸಿಬ್ಬಂದಿಗಳಿಗೆ ಪಲ್ಸ್ ಪೋಲಿಯೋ ಲಸಿಕೆ ಕುರಿತು ತರಬೇತಿ ನೀಡಿದರು.

ಕಾರ್ಯಕ್ರಮದಲ್ಲಿ ಡಿ. ಎಸ್.ಓ. ಡಾ.ಗಣೇಶ್, ಟಿ.ಎಮ್.ಓ. ಡಾ. ಚಂದ್ರಶೇಖರಯ್ಯ ಸ್ವಾಮಿ, ಡಿ.ಎಫ್. ಡ್ಲ್ಯು.ಓ. ಡಾ ಶಿವಕುಮಾರ, ಜಿಲ್ಲಾ ಆರೋಗ್ಯ ಉಪ ಶಿಕ್ಷಣಾಧಿಕಾರಿ ಬಸಯ್ಯ,ಜಿಲ್ಲೆಯ ವಿವಿಧ ತಾಲೂಕಾ ಆರೋಗ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾ-ರಿಗಳು, ಸಿ.ಹೆಚ್.ಸಿ, ಪಿ.ಹೆಚ್.ಸಿ.ಗಳ ಆಡಳಿತ ವೈದ್ಯಾಧಿಕಾರಿಗಳು, ಡಿವೈಹೆಚ್‌ಇಓ, ಬಿಹೆಚ್‌ಇಓ, ಆರೋಗ್ಯ ನೀರಿಕ್ಷಣಾಧಿಕಾರಿಗಳು, ಹಿರಿಯ ಪ್ರಾಥಮಿಕ ಆರೋಗ್ಯ ನೀರಿಕ್ಷಣಾಧಿಕಾ-ರಿಗಳಿಗೆ ತರಬೇತಿ ನೀಡಲಾಯಿತು. ಮಾನ್ವಿ: ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಪಲ್ಸ್ ಪೋಲಿಯೋ ಲಸಿಕಾ ತರಬೇತಿ ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಸುರೇಂದ್ರ ಬಾಬು ಮಾತನಾಡಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101